ಪ್ರೇರಕ : "ಒಂದನ್ನು ನಾಲ್ಕು ಭಾಗ ಮಾಡಿ ಒಂದು ಭಾಗ ತೆಗೆದರೆ ಎಷ್ಟು ಉಳಿಯಿತು ?"
ವಯಸ್ಕ : "ನಾಲ್ಕರಲ್ಲಿ ಮೂರು (ಮುಕ್ಕಾಲು)" $\frac{3}{4}$.
ಪ್ರೇರಕ : "ಒಂದನ್ನು ನೂರು ಭಾಗ ಮಾಡಿ ಖಾಲಿ ಒಂದು ಭಾಗ ಇಟ್ಟರೆ ಎಷ್ಟಾಯಿತು ?"
ವಯಸ್ಕ : "ನೂರರಲ್ಲಿ ಒಂದು (ನೂರನೇ ಒಂದು)".
ಪ್ರೇರಕ : "ಇದನ್ನೇ ಶತಾಂಶ ಅಥವಾ ಶೇಕಡ ಎಂದು ಹೇಳುವುದು. ಅದರ ಚಿಹ್ನೆ—%"

100ರ 1 ಭಾಗ $= \frac{1}{100} = 1\%$.
100ರ 10 ಭಾಗ $= \frac{10}{100} = 10\%$
100ರ 50 ಭಾಗ $= \frac{50}{100} = 50\%$

ಶ
ಶಾ
ಶಿ
ಶೀ
ಶು
ಶೂ
ಶೃ
ಶೆ
ಶೇ
ಶೈ
ಶೊ
ಶೋ
ಶೌ
ಶಂ
ಶಃ

ಅ	ಆ	ಇ	ಈ	ಉ	ಊ	ಋ	ಎ	ಏ	ಐ	ಒ	ಓ	ಔ	ಅಂ	ಅಃ
ಶ	ಶಾ	ಶಿ	ಶೀ	ಶು	ಶೂ	ಶೃ	ಶೆ	ಶೇ	ಶೈ	ಶೊ	ಶೋ	ಶೌ	ಶಂ	ಶಃ
ಷ	ಷಾ	ಷಿ	ಷೀ	ಷು	ಷೂ	ಷೃ	ಷೆ	ಷೇ	ಷೈ	ಷೊ	ಷೋ	ಷೌ	ಷಂ	ಷಃ
ಬ	ಬಾ	ಬಿ	ಬೀ	ಬು	ಬೂ	ಬೃ	ಬೆ	ಬೇ	ಬೈ	ಬೊ	ಬೋ	ಬೌ	ಬಂ	ಬಃ
ಢ	ಢಾ	ಢಿ	ಢೀ	ಢು	ಢೂ	ಢೃ	ಢೆ	ಢೇ	ಢೈ	ಢೊ	ಢೋ	ಢೌ	ಢಂ	ಢಃ
ಧ	ಧಾ	ಧಿ	ಧೀ	ಧು	ಧೂ	ಧೃ	ಧೆ	ಧೇ	ಧೈ	ಧೊ	ಧೋ	ಧೌ	ಧಂ	ಧಃ
ಫ	ಫಾ	ಫಿ	ಫೀ	ಫು	ಫೂ	ಫೃ	ಫೆ	ಫೇ	ಫೈ	ಫೊ	ಫೋ	ಫೌ	ಫಂ	ಫಃ
ಖ	ಖಾ	ಖಿ	ಖೀ	ಖು	ಖೂ	ಖೃ	ಖೆ	ಖೇ	ಖೈ	ಖೊ	ಖೋ	ಖೌ	ಖಂ	ಖಃ
ಘ	ಘಾ	ಘಿ	ಘೀ	ಘು	ಘೂ	ಘೃ	ಘೆ	ಘೇ	ಘೈ	ಘೊ	ಘೋ	ಘೌ	ಘಂ	ಘಃ
ಛ	ಛಾ	ಛಿ	ಛೀ	ಛು	ಛೂ	ಛೃ	ಛೆ	ಛೇ	ಛೈ	ಛೊ	ಛೋ	ಛೌ	ಛಂ	ಛಃ
ಝ	ಝಾ	ಝಿ	ಝೀ	ಝು	ಝೂ	ಝೃ	ಝೆ	ಝೇ	ಝೈ	ಝೊ	ಝೋ	ಝೌ	ಝಂ	ಝಃ
ಠ	ಠಾ	ಠಿ	ಠೀ	ಠು	ಠೂ	ಠೃ	ಠೆ	ಠೇ	ಠೈ	ಠೊ	ಠೋ	ಠೌ	ಠಂ	ಠಃ
ಪ	ಪಾ	ಪಿ	ಪೀ	ಪು	ಪೂ	ಪೃ	ಪೆ	ಪೇ	ಪೈ	ಪೊ	ಪೋ	ಪೌ	ಪಂ	ಪಃ
ಯ	ಯಾ	ಯಿ	ಯೀ	ಯು	ಯೂ	ಯೃ	ಯೆ	ಯೇ	ಯೈ	ಯೊ	ಯೋ	ಯೌ	ಯಂ	ಯಃ
ಣ	ಣಾ	ಣಿ	ಣೀ	ಣು	ಣೂ	ಣೃ	ಣೆ	ಣೇ	ಣೈ	ಣೊ	ಣೋ	ಣೌ	ಣಂ	ಣಃ
ದ	ದಾ	ದಿ	ದೀ	ದು	ದೂ	ದೃ	ದೆ	ದೇ	ದೈ	ದೊ	ದೋ	ದೌ	ದಂ	ದಃ
ವ	ವಾ	ವಿ	ವೀ	ವು	ವೂ	ವೃ	ವೆ	ವೇ	ವೈ	ವೊ	ವೋ	ವೌ	ವಂ	ವಃ
ನ	ನಾ	ನಿ	ನೀ	ನು	ನೂ	ನೃ	ನೆ	ನೇ	ನೈ	ನೊ	ನೋ	ನೌ	ನಂ	ನಃ
ಥ	ಥಾ	ಥಿ	ಥೀ	ಥು	ಥೂ	ಥೃ	ಥೆ	ಥೇ	ಥೈ	ಥೊ	ಥೋ	ಥೌ	ಥಂ	ಥಃ
ರ	ರಾ	ರಿ	ರೀ	ರು	ರೂ	ರೃ	ರೆ	ರೇ	ರೈ	ರೊ	ರೋ	ರೌ	ರಂ	ರಃ
ಹ	ಹಾ	ಹಿ	ಹೀ	ಹು	ಹೂ	ಹೃ	ಹೆ	ಹೇ	ಹೈ	ಹೊ	ಹೋ	ಹೌ	ಹಂ	ಹಃ
ಚ	ಚಾ	ಚಿ	ಚೀ	ಚು	ಚೂ	ಚೃ	ಚೆ	ಚೇ	ಚೈ	ಚೊ	ಚೋ	ಚೌ	ಚಂ	ಚಃ
ಟ	ಟಾ	ಟಿ	ಟೀ	ಟು	ಟೂ	ಟೃ	ಟೆ	ಟೇ	ಟೈ	ಟೊ	ಟೋ	ಟೌ	ಟಂ	ಟಃ
ಸ	ಸಾ	ಸಿ	ಸೀ	ಸು	ಸೂ	ಸೃ	ಸೆ	ಸೇ	ಸೈ	ಸೊ	ಸೋ	ಸೌ	ಸಂ	ಸಃ
ತ	ತಾ	ತಿ	ತೀ	ತು	ತೂ	ತೃ	ತೆ	ತೇ	ತೈ	ತೊ	ತೋ	ತೌ	ತಂ	ತಃ
ಭ	ಭಾ	ಭಿ	ಭೀ	ಭು	ಭೂ	ಭೃ	ಭೆ	ಭೇ	ಭೈ	ಭೊ	ಭೋ	ಭೌ	ಭಂ	ಭಃ
ಮ	ಮಾ	ಮಿ	ಮೀ	ಮು	ಮೂ	ಮೃ	ಮೆ	ಮೇ	ಮೈ	ಮೊ	ಮೋ	ಮೌ	ಮಂ	ಮಃ
ಲ	ಲಾ	ಲಿ	ಲೀ	ಲು	ಲೂ	ಲೃ	ಲೆ	ಲೇ	ಲೈ	ಲೊ	ಲೋ	ಲೌ	ಲಂ	ಲಃ
ಕ	ಕಾ	ಕಿ	ಕೀ	ಕು	ಕೂ	ಕೃ	ಕೆ	ಕೇ	ಕೈ	ಕೊ	ಕೋ	ಕೌ	ಕಂ	ಕಃ
ಡ	ಡಾ	ಡಿ	ಡೀ	ಡು	ಡೂ	ಡೃ	ಡೆ	ಡೇ	ಡೈ	ಡೊ	ಡೋ	ಡೌ	ಡಂ	ಡಃ
ಜ	ಜಾ	ಜಿ	ಜೀ	ಜು	ಜೂ	ಜೃ	ಜೆ	ಜೇ	ಜೈ	ಜೊ	ಜೋ	ಜೌ	ಜಂ	ಜಃ
ಗ	ಗಾ	ಗಿ	ಗೀ	ಗು	ಗೂ	ಗೃ	ಗೆ	ಗೇ	ಗೈ	ಗೊ	ಗೋ	ಗೌ	ಗಂ	ಗಃ
ಳ	ಳಾ	ಳಿ	ಳೀ	ಳು	ಳೂ	ಳೃ	ಳೆ	ಳೇ	ಳೈ	ಳೊ	ಳೋ	ಳೌ	ಳಂ	ಳಃ

ಞ ಙ


ಐಶ್ವರ್ಯ

ಪ್ರೇರಕನಿಗೆ ಸೂಚನೆಗಳು

1. **ಅರಿವು :** ಅನುಬಂಧ ೧ ಮತ್ತು ೨, ಪುಟಗಳು 71—74.

2. **ಅಕ್ಷರ ಜ್ಞಾನ :** 'ರ' ರೂಪದ ಬದಲು ಅರ್ಕ ಚಿಹ್ನೆಯನ್ನು ಬಳಸುವ ಬಗ್ಗೆ 3.3. 17ರಲ್ಲಿ ವಿವೇಚಿಸಲಾಗಿದೆ. ಅನುಬಂಧ ೩ (17), ಪುಟ 80.
   —ಎಲ್ಲಾ ಅಕ್ಷರಗಳ ಒತ್ತಕ್ಷರಗಳನ್ನು ಬರೆಯುವುದು.
   —ಅಕ್ಷರ ಪಟ 60ನೇ ಪುಟದಲ್ಲಿದೆ.

3. **ಶಬ್ದ ಮತ್ತು ವಾಕ್ಯರಚನೆಗಳು :**

4. **ವ್ಯವಹಾರ ಗಣಿತ :** ವಯಸ್ಕರ ಅನುಭವ ಮತ್ತು ಜ್ಞಾನವನ್ನು ಬಳಸಿಕೊಂಡೇ ಈ ಕೆಳಗಿನ ವಿಷಯಗಳನ್ನು ಪ್ರೇರಕನು ವಯಸ್ಕರಲ್ಲಿ ಇನ್ನೂ ಖಚಿತಪಡಿಸಬಹುದು.

   ಕಾಲ : ವರ್ಷ — ತಿಂಗಳು — ದಿನ.
   ದಿನ — ಗಂಟೆ — ನಿಮಿಷ – ಸೆಕೆಂಡುಗಳು.

   ಅಳತೆ : ಸೆಂಟಿಮೀಟರ್ – ಮೀಟರ್ – ಕಿಲೋಮೀಟರ್.
   ಇಂಚು – ಅಡಿ – ಗಜ – ಫರ್ಲಾಂಗು – ಮೈಲು.

   ಭಾರ : ಗ್ರಾಂ – ಕಿಲೋಗ್ರಾಂ – ಕ್ವಿಂಟಾಲು – ಮೆಟ್ರಿಕ್ ಟನ್.

   ಗಾತ್ರ : ಸೆಂಟಿಲೀಟರ್ – ಲೀಟರ್.

ಅ ನು ಬ ಂ ಧ – ೧

ಸೂತ್ರವಿವರಣೆ

(ಮೂಲ : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ-೧, ಪುಟಗಳು : 32–34)

0.1 ಸೂತ್ರೀಕರಣ ಮತ್ತು ಸೂತ್ರಮಾಲೆಯ ರಚನೆಯಾದ ಮೇಲೆ ಪ್ರೇರಕನು ತನ್ನ ಹಳ್ಳಿಯ ವಯಸ್ಕರ ಕೂಟ ಕಟ್ಟಿ ಕ್ರಮಪ್ರಕಾರವಾಗಿ ಒಂದೊಂದೇ ಸೂತ್ರದ ಮೂಲಕ ಸಂವಾದ ನಡೆಸುವ ವಿಧಾನಕ್ಕೆ ಸೂತ್ರವಿವರಣೆ ಎಂದು ಕರೆಯಬಹುದು.

0.2 ಸೂತ್ರವಿವರಣೆಯಲ್ಲೂ ಗಮನಿಸಬೇಕಾದ ಕೆಲವು ಹಂತಗಳಿವೆ. ಕಲಿಯುವವರು ಸಂವಾದದ ಮೂಲಕ ಸೂತ್ರೀಕರಿಸಿದ ವಸ್ತುವನ್ನು ವಿಶ್ಲೇಷಿಸಿ, ವಿಭಜಿಸಲಿಕ್ಕೆ ತೊಡಗುವರು. ಈ ಕಾರ್ಯದಿಂದ ವಸ್ತುವಿನ ಬೇರೆ ಬೇರೆ ಭಾಗಗಳಿಗಿರುವ ಸಂಬಂಧದ ಸ್ಪಷ್ಟ ಕಲ್ಪನೆಯಾಗಿ ಇಡೀ ವಸ್ತುವಿನ ನಿಜಸ್ವರೂಪವನ್ನು ಬೆಳಕಿಗೆ ತರುವರು. ಇಷ್ಟರವರೆಗೆ ಆ ನಿಜಸ್ವರೂಪವು ಅವರಿಂದ ಮರೆಯಾಗಿತ್ತು. ಕೆಳಗೆ ಬರುವ ವಿವೇಚನೆಯಲ್ಲಿ ಸೂತ್ರವನ್ನು ಚಿತ್ರವೆಂದೇ ಪರಿಗಣಿಸಲಾಗಿದೆ. ಚಿತ್ರದ ಬಗ್ಗೆ ಹೇಳಿದ ವಿಷಯಗಳನ್ನು ಬೇರೆ ಮಾಧ್ಯಮದ ಸೂತ್ರಗಳಿಗೂ ತಕ್ಕಂತೆ ಅಳವಡಿಸಬಹುದು.

1.1 ಪ್ರೇರಕನು ವಯಸ್ಕರಿಗೆ ಸೂತ್ರದ ಚಿತ್ರವನ್ನು ತೋರಿಸಿ ಅವರಿಂದ ಆ ಚಿತ್ರದ ವಿವರಣೆ ಪಡೆಯುವನು. ಚಿತ್ರದಲ್ಲಿ ಒಂದು ಸಮಸ್ಯೆ ಅಥವಾ ವಿಷಯವನ್ನು ಎತ್ತಿ ತೋರಿಸಲು ಬೇಕಾದ ಸಂಗತಿಗಳೇ ಇರುತ್ತವೆ. ಆದ್ದರಿಂದ ಆ ಚಿತ್ರದ ಪ್ರತಿಯೊಂದು ಸಂಗತಿಯನ್ನೂ ಗಮನಿಸಿ ಪ್ರೇರಕನು ಅದು ಯಾವುದನ್ನು ಸೂಚಿಸುತ್ತದೆ ಎಂಬುದನ್ನು ಶಿಕ್ಷಾರ್ಥಿಗಳು ಕಂಡುಹಿಡಿಯುವಂತೆ ಮಾಡಬೇಕು. ಚಿತ್ರದಲ್ಲಿ ಸೂತ್ರದ ಶಬ್ದವೂ ಇರುವುದು. ಅದನ್ನು ವಯಸ್ಕರು ಗಮನಿಸಿದರೆ ಅದು ಸೂತ್ರದ ಶಬ್ದರೂಪ ಎಂದು ಪ್ರೇರಕನು ಹೇಳಬಹುದು.

1.2 ಚಿತ್ರದ ಪೂರ್ಣವಿವರಣೆ ಪಡೆದ ಮೇಲೆ ಆ ಚಿತ್ರ ಯಾವ ವಿಷಯ ಅಥವಾ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ ಎಂಬುದನ್ನು ವಯಸ್ಕರು ಕಂಡು ಹಿಡಿಯುವಂತೆ ಮಾಡಬೇಕು. ಅಷ್ಟೇ ಅಲ್ಲ, ಆ ಸಮಸ್ಯೆಯ ಬಗ್ಗೆ ವಸ್ತುನಿಷ್ಠವಾಗಿಯೂ ಚರ್ಚೆ ಮಾಡುವಂತೆ ಪ್ರೇರಕನು ನೋಡಿಕೊಳ್ಳಬೇಕು.

1.3 ಚಿತ್ರವು ಸೂಚಿಸುವ ಸಮಸ್ಯೆಯ ಬಗ್ಗೆ ವಸ್ತುನಿಷ್ಠ ಚರ್ಚೆ ಮಾತ್ರ ಸಾಲದು. ಅರಿವಿನ ಜಾಗೃತಿ ಆಗಬೇಕಾದರೆ ಇಷ್ಟರವರೆಗೆ ವಿಶ್ಲೇಷಿಸಿದ ಸಮಸ್ಯೆ ಅಥವಾ ವಿಷಯ ನಮ್ಮ ಊರಿನ ಸಮಸ್ಯೆಯನ್ನೇ ಪ್ರತಿ ಬಿಂಬಿಸುತ್ತದೆ ಎಂಬ ಜ್ಞಾನ ಕೂಡ ವಯಸ್ಕರಲ್ಲಿ ಮೂಡಬೇಕು. ಇಲ್ಲಿ ವಯಸ್ಕರು ಆ ಸಮಸ್ಯೆ ಅಥವಾ ವಿಷಯದ ಬಗ್ಗೆ ತಮ್ಮ ಊರಿನ ನಿದರ್ಶನಗಳನ್ನು ಕೊಟ್ಟು ಚರ್ಚೆಯನ್ನು ಮುಂದುವರಿಸಬಹುದು.

2.1 ಸಮಸ್ಯೆಯ ವಸ್ತುನಿಷ್ಠ ವಿಚಾರವಾಗಿ ಆ ಸಮಸ್ಯೆ ತಮ್ಮದೇ ಎಂಬ ಅರಿವು ಮೂಡಿದ ಮೇಲೆ ಆ ಸಮಸ್ಯೆಯನ್ನು ಬಗೆಹರಿಸಲು ಏನು ಮಾಡಬೇಕು ಎಂಬುದರ ಬಗ್ಗೆ ವಯಸ್ಕರು ಆಲೋಚಿಸುವರು. ಸಂವಾದದ ಮೂಲಕ ಬೇರೆ ಬೇರೆ ಪರಿಹಾರಮಾರ್ಗಗಳನ್ನು ವಿಶ್ಲೇಷಿಸಿ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಹಿಡಿಯುವರು.

2.2 ಸಮಸ್ಯೆಯ ಪರಿಹಾರದ ಬಗ್ಗೆ ಸಮಾಲೋಚನೆ ನಡೆದ ಮೇಲೆ ಪರಿಹಾರಮಾರ್ಗವನ್ನು ಕಾರ್ಯರೂಪಕ್ಕೆ ತರುವ ಯೋಜನೆಯನ್ನು ಹಾಕಬೇಕಾಗುವುದು. ಈ ಸಂದರ್ಭದಲ್ಲಿ ಪರಿಹಾರಮಾರ್ಗದಲ್ಲಿರುವ ಬೇರೆ ಬೇರೆ ಅಡೆತಡೆಗಳು, ಅದನ್ನು ಕಾರ್ಯರೂಪಕ್ಕೆ ತರಲು ಮಾಡಬೇಕಾದ ವಿವಿಧ ಕೆಲಸಗಳು, ಆ ಕೆಲಸಗಳನ್ನು ನಿರ್ವಹಿಸಲು ಬೇಕಾದ ಸೂಕ್ತ ಸಮಯ ಹಾಗೂ ಅವುಗಳ ನಿರ್ವಹಣೆಗೆ ಬೇಕಾದ ಅವಶ್ಯಕತೆಗಳು ಇವೆಲ್ಲವುಗಳ ಬಗ್ಗೆ ಚರ್ಚೆ ನಡೆಯುವುದು.

2.3 ಪರಿಹಾರಮಾರ್ಗವನ್ನು ಕಾರ್ಯರೂಪಕ್ಕೆ ತರುವಲ್ಲಿಯ ಪ್ರತಿಯೊಂದು ವಿಷಯವನ್ನು ವಿಶ್ಲೇಷಿಸಿದ ನಂತರ, ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸಲು ವಯಸ್ಕರು ಜವಾಬ್ದಾರಿ ವಹಿಸುವರು ಮತ್ತು ಕೆಲಸ ಪೂರೈಕೆಗೆ ನಿರ್ದಿಷ್ಟ ಕಾಲಮಿತಿಯನ್ನೂ ಸೂಚಿಸುವರು.

3. ಸಮಸ್ಯೆಯ ಪೂರ್ಣಜ್ಞಾನ ಹಾಗೂ ಅದನ್ನು ಪರಿಹರಿಸುವಲ್ಲಿ ಯೋಗವಾದ ಮಾರ್ಗವನ್ನು ಕಂಡುಹಿಡಿದ ಮೇಲೆ, ಸಮಸ್ಯೆಯನ್ನು ಸೂಚಿಸುವ ಪದವನ್ನು ವಯಸ್ಕರು ಸಂವಾದ, ಚರ್ಚೆಯ ಮೂಲಕವೇ ಓದಲೂ ಬರೆಯಲೂ ಕಲಿಯುವರು. ಈ ಘಟ್ಟದಲ್ಲಿ ಬರುವ ವಿವಿಧ ವಿಷಯಗಳನ್ನು 'ಅರಿವಿನ ಜಾಗೃತಿ'ಯ ಮೂರನೇ ಹಂತವಾದ 'ಅಕ್ಷರ ಜ್ಞಾನ'ದಲ್ಲಿ ವಿವರಿಸಲಾಗುವುದು.

4. ಪರಿಹಾರವನ್ನು ಕಂಡುಹಿಡಿದು ಅದನ್ನು ನಿರ್ವಹಿಸಲು ವಯಸ್ಕರು ಜವಾಬ್ದಾರಿಗಳನ್ನು ಹಂಚಿಕೊಂಡ ಮೇಲೆ ಕೆಲಸಗಳನ್ನು ನಿರ್ವಹಿಸಬೇಕಾಗುವುದು. ನಿಶ್ಚಿತ ಕಾಲಕ್ಕೆ ಆ ಕೆಲಸಗಳ ನಿರ್ವಹಣೆಯ ಬಗ್ಗೆ ವಿವೇಚನೆ ನಡೆಸಿ ಕೂಟವನ್ನು ಮುಂದುವರಿಸಬೇಕಾಗುವುದು. ಇದೇ ಅರಿವಿನ ಜಾಗೃತಿಯ ಕೊನೆಯ ಹಂತ. ಕಾರ್ಯ ನಿರ್ವಹಣೆಯಲ್ಲಿ ಹೊಸ ಸಮಸ್ಯೆಗಳು ತಲೆದೋರಬಹುದು ಸಂವಾದದ ಮೂಲಕ ಅವನ್ನು ಬಗೆಹರಿಸಲು ಬೇರೆ ಮಾರ್ಗಗಳನ್ನು ಕಂಡುಹಿಡಿಯಬೇಕಾಗಬಹುದು. ಅರಿವಿನ ಜಾಗೃತಿಯು ಹೀಗೆ ವಿಚಾರ-ಕೃತಿ, ಯೋಚನೆ - ಕೆಲಸಗಳ ಸಂಯೋಗದಿಂದಲೇ ರೂಪಿತಗೊಳ್ಳುವುದು ಮತ್ತು ಮುಂದುವರಿಯುವುದು.

ಅನುಬಂಧ – ೨

ಸೂತ್ರಮಾಲೆ

(ಮೂಲ: ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ–೧, ಪುಟಗಳು: 34—38)

0 ಜಗಳ, ಕಾಡು, ಕೂಲಿ, ಭೂಮಿ, ಜೀತ, ಸಾಲ, ಚಟ, ಮಹಿಳೆ / ಹೆಂಗಸು, ಆಹಾರ, ಹರಿಕಥೆ, ದೇವಸ್ಥಾನ, ಪ್ರಯಾಣ, ಮೂಢನಂಬಿಕೆ, ಜ್ಞಾನ, ಔಷಧಿ, ಶುಚಿತ್ವ, ಐಶ್ವರ್ಯ—ಐಶ್ವರ್ಯ.

1.1 ಜಗಳ: ನಮ್ಮಲ್ಲಿ ಯಾವ ರೀತಿಯ ಜಗಳಗಳು ತಲೆದೋರುತ್ತವೆ? ಜಗಳಕ್ಕೆ ಕಾರಣಗಳು ಯಾವುವು? ಜಗಳದಿಂದಾಗುವ ಅನಿಷ್ಟಗಳೇನು? ಪ್ರಚಲಿತ ನ್ಯಾಯ ವ್ಯವಸ್ಥೆಯಿಂದ ಬಡವರಿಗೆ ಸುಲಭವಾಗಿ ನ್ಯಾಯ ಸಿಗುತ್ತದೆಯೇ? ಜಗಳವನ್ನು ತಪ್ಪಿಸಬಹುದೇ ಏನು ಮಾಡಬೇಕು? (ಕೂಟ ರಚನೆ ಮತ್ತು ಯೋಗ್ಯ ಮುಖಂಡರಿಂದ ನ್ಯಾಯ ದೊರಕಿಸಿಕೊಡುವಂತೆ ಮಾಡುವುದು).

1.2 **ಕಾಡು :** ಮಳೆಯ ಅಭಾವಕ್ಕೆ ಕಾರಣ ಏನು ? ಕಾಡುಗಳು ಹೇಗೆ ನಾಶವಾದುವು ? "ರುಕ್ಷಾ ಕಡಿದು ಭಿಕ್ಷಾ ಬೇಡುವ ಪರಿಸ್ಥಿತಿ ಬಂದಿದೆ ನಮಗೆ". ಸರಕಾರದ 'ಅರಣ್ಯ ನೀತಿ'. ಕಾಡು ಬೆಳೆಸಲು ಸರಕಾರದ ಯೋಜನೆಗಳು—ಅವನ್ನು ಪುರಸ್ಕರಿಸಲಿಕ್ಕೆ ನಾವೇನು ಮಾಡಬಹುದು ? ನಾವೇ ಹೆಚ್ಚು ಹೆಚ್ಚಾಗಿ ಮರಗಳನ್ನು ಬೆಳೆಸಬಹುದೋ ? ಪರಿಸರ ರಕ್ಷಣೆ.

1.3 **ಕೂಲಿ :** ಕರ್ನಾಟಕದ ಕಾನೂನಿನ ಪ್ರಕಾರ ಕನಿಷ್ಠ ಕೂಲಿ—ಇದು ಸಿಗುತ್ತಿದೆಯೇ ? ಕೆಲಸದ ಪ್ರಾಧಾನ್ಯ—ಉತ್ಪನ್ನ ಕೆಲಸದಿಂದ ; ಹೆಚ್ಚುವರಿ ಬೆಲೆ ಕೆಲಸದಿಂದ ; ಕೆಲಸವಿಲ್ಲದೇ ಉತ್ಪನ್ನವಿಲ್ಲ—ಆದರೆ ಪ್ರಚಲಿತ ಸ್ಥಿತಿ : ಬಂಡವಾಳ ಹಾಕಿದವರಿಗೆ, ಭೂಮಿ ಅಧಿಕ ಇದ್ದವರಿಗೆ ಉತ್ಪನ್ನದ ಸಿಂಹಪಾಲು. ಫಲದ (ಉತ್ಪನ್ನದ) ಯೋಗ್ಯವಾದ ಪಾಲು ಕೆಲಸದಾಳುಗಳಿಗೆ ಬರಲು ಏನು ಮಾಡಲು ಸಾಧ್ಯ ? —(ಕೆಲಸದಾಳುಗಳ, ಮೊದಲು ಊರಿನವರ, ನಂತರ ಅಕ್ಕಪಕ್ಕದ ಊರುಗಳ ಕೆಲಸದಾಳುಗಳ ಸಂಘಟನೆ).

1.4 **ಭೂಮಿ :** ಯಾರ್ಯಾರಿಗೆ ಎಷ್ಟೆಷ್ಟು ಭೂಮಿ ಇವೆ ? ಭೂಮಿಯ ನಿಜವಾದ ಒಡೆತನ ಯಾರದ್ದು ? ದೇಶದ ಸಂಪನ್ಮೂಲಗಳ ಬಳಕೆ. ಭೂಸುಧಾರಣೆಗಳ ಮುಖ್ಯ ನೀತಿ ಏನು ? ಕರ್ನಾಟಕದಲ್ಲಿ ಅವು ಜಾರಿಗೊಂಡಿರುವ ರೀತಿ. ನಮ್ಮ ಪ್ರದೇಶದಲ್ಲಿ ಆಗುವ ಅನ್ಯಾಯಗಳು—ಅವನ್ನು ಯಾವ ರೀತಿಯಲ್ಲಿ ತಡೆಹಿಡಿಯಬಹುದು ?

1.5 **ಜೀತ :** ಜೀತದಾಳುಗಳ ಕೆಲಸದ ಪರಿಸ್ಥಿತಿ ಜೀತಕ್ಕೆ ಹಿರಿಯರು ಏಕೆ ಮಕ್ಕಳನ್ನು ಕಳುಹಿಸುತ್ತಾರೆ ? (ಹಣದ ಅವಶ್ಯಕತೆ) ಪರಿಹಾರವೇನು ?—(ಉಳಿತಾಯ ಮಾಡುವುದು).

1.6 **ಸಾಲ :** ಸಾಲ ಮಾಡಬೇಕಾದ ಸಾಮಾನ್ಯ ಸಂದರ್ಭಗಳು—ಯಾವ ಕಾರಣಗಳಿಗೆ ಸಾಲದ ಮೊರೆ ಹೋಗುತ್ತಾರೆ ? ಸಾಲ ಮರು ಪಾವತಿ ಮಾಡಲಿರುವ ನಿಯಮಗಳು–ಬಡ್ಡಿಯ ದರ, ಅವಧಿ. ಸಾಲ ಸಕಾಲದಲ್ಲಿ ಮರುಪಾವತಿ ಮಾಡದಿದ್ದರೆ ಆಗುವ ಅನಿಷ್ಟಗಳು ಯಾವುವು ? ಸಾಲ ತಪ್ಪಿಸಲು ಏನು ಮಾಡೋಣ ?—(ಕುಟುಂಬದ ಉಳಿತಾಯ ಮಾತ್ರ ಸಾಲದು. ಸಮುದಾಯ ಉಳಿತಾಯದ ಅವಶ್ಯಕತೆ. ಎಲ್ಲರ ನಿಧಿಯನ್ನು ಹೇಗೆ ಕೂಡಿಸೋಣ ?)

1.7 **ಚಟ :** ಪ್ರಮುಖ ಚಟಗಳು—ಏಕೆ ಅವುಗಳ ಅಭ್ಯಾಸ ?-ಜೀವನದ ನೋವನ್ನು ಮರೆಮಾಡಲು ಪ್ರಯತ್ನ. ಜೀವನದಲ್ಲಿ ಸಾರ್ಥಕತೆ ಬರುವುದು ಹೇಗೆ ?

1.8 **ಮಹಿಳೆ :** ಕುಟುಂಬದಲ್ಲಿ ಮಹಿಳೆಯ ಪಾತ್ರ—ಮಹಿಳೆಗೆ ಸಮಾಜ ಕೊಡುವ ಸ್ಥಾನ. ಮಹಿಳೆಯ ಕೊಡುಗೆಗೂ ಅವಳಿಗೆ ಸಿಗುವ ಪುರಸ್ಕಾರಕ್ಕೂ ಇರುವ ಅಂತರ—ಬೇರೆ ಬೇರೆ ನಿದರ್ಶನಗಳು : ಕೆಲಸದಲ್ಲಿ ಗಂಡಿಗಿಂತ ಅವಳಿಗೆ ಕಡಿಮೆ ಕೂಲಿ, ಸಮಾಜ ನಿರ್ವಹಿಸುವಲ್ಲಿ ಅವಳಿಗೆ ಹಕ್ಕಿಲ್ಲ....ಈ ಪರಿಸ್ಥಿತಿಯನ್ನು ಬದಲಾಯಿಸಬಹುದೋ ? ಏನು ಮಾಡಬಹುದು ?

1.9 **ಆಹಾರ :** ಆಹಾರದ ಅಭಾವಕ್ಕೆ ಕಾರಣ ಏನು ? ಎಲ್ಲರು ತಿಂದು ತೇಗುವಷ್ಟು ಆಹಾರ ಧಾನ್ಯಗಳ ಉತ್ಪನ್ನವಾಗುತ್ತಿದ್ದರೂ ಹಲವರು ಹಸಿವಿನಿಂದ ನರಳುವ ಪರಿಸ್ಥಿತಿ. ಪೌಷ್ಟಿಕ ಆಹಾರದ ಅಭಾವ—ಅದರಿಂದ ಆಗುವ ಪರಿಣಾಮಗಳು : ಹಸಿವು, ರೋಗ, ಬಾಲ್ಯ ಮರಣ....ಆಹಾರದಲ್ಲಿ ಪೌಷ್ಟಿಕಾಂಶವನ್ನು ನಮ್ಮ ಪರಿಸರದಿಂದಲೇ ಬರುವಂತೆ ನೋಡಿ ಕೊಳ್ಳಬಹುದೋ ?

1.10 ಹರಿಕಥೆ : ಹರಿಕಥೆಗಳನ್ನು ಏತಕ್ಕೋಸ್ಕರ ಏರ್ಪಡಿಸುತ್ತಾರೆ ? ಹಳ್ಳಿ ಜನರ ಇತರೆ ಮನೋರಂಜನೆಯ ಸಾಧನಗಳಾವುವು ?—ಹಳ್ಳಿಯ ಸಂಸ್ಕೃತಿ—ಹಳ್ಳಿಯ ಸಂಸ್ಕೃತಿಗೆ ತಿರಸ್ಕಾರ : ಸುಶಿಕ್ಷಿತರ, ಪಟ್ಟಣದ ಸಂಸ್ಕೃತಿಗೆ ಪುರಸ್ಕಾರ. ನಮ್ಮ ಸಂಸ್ಕೃತಿಯ ಬಗ್ಗೆ ಸ್ವಾಭಿಮಾನ ಹೇಗೆ ಹೆಚ್ಚಿಸಬಹುದು ? ಹಳ್ಳಿಯ ಸಂಸ್ಕೃತಿಯನ್ನು ಕಾಪಾಡಲೂ ವೃದ್ಧಿಸಲೂ ಯಾವ್ಯಾವ ಕ್ರಮಗಳನ್ನು ಕೈಗೊಳ್ಳಬಹುದು ?

1.11 ದೇವಸ್ಥಾನ : ದೇವರು, ಪೂಜೆ, ಹಬ್ಬ, ಜಾತ್ರೆ, ಹರಕೆಗಳು, ಆಚಾರಗಳು, ದೇವರಲ್ಲಿ ನಂಬಿಕೆ—ಅದರ ನಿಜ ಅರ್ಥ ಏನು ? ದೇವರಿಗೆ ಪ್ರತ್ಯೇಕವಾಗಿ ಮಾಡುವ ಪೂಜೆ, ಹರಕೆ, ಜಾತ್ರೆಗಳ ಸಂದರ್ಭಗಳು : ಕಾಯಿಲೆ, ಮಳೆಯ ಅಭಾವ, ಬೇರೆ ಬೇರೆ ಬೇಡಿಕೆಗಳು...."ದೇವರು ಕೊಟ್ಟ ಜೋಳಿಗೆಯನ್ನು ಗೂಟಕ್ಕೆ ತಗಲಿ ಹಾಕಿದರೆ ಹೊಟ್ಟೆ ತುಂಬುತ್ತೋ ?" ಮಂತ್ರಿಸಿದರೆ ಮಾವಿನಕಾಯಿ ಉದುರುವುದೇ ? ದೇವರಲ್ಲಿ ನಂಬಿಕೆ ಇಟ್ಟರೂ ಮಾನವನು ಬುದ್ಧಿ ಉಪಯೋಗಿಸಿ ಕೆಲಸ ಸಾಧನೆ ಮಾಡುವ ಅವಶ್ಯಕತೆ.

1.12 ಪ್ರಯಾಣ : ಜನಸಾಮಾನ್ಯರಿಗೆ ಸಾರಿಗೆಯ ಕೊರತೆ—ಶ್ರೀಮಂತರ ಅಧೀನದಲ್ಲಿರುವ ಸಾರಿಗೆ ಸಾಧನಗಳು. ಸಾರಿಗೆ ಅವಶ್ಯಕತೆ ಈಡೇರಿಸಲು ಏನು ಮಾಡಲು ಸಾಧ್ಯ ? ಎಲ್ಲರಿಗೂ ಉಪಯೋಗವಾಗುವಂತಹ ಸಾರಿಗೆ ಮಾಧ್ಯಮ ತರಲು ಏನು ಮಾಡಲು ಸಾಧ್ಯ ?

1.13 ಮೂಢನಂಬಿಕೆ : ಮೂಢನಂಬಿಕೆ, ಒಣ ಆಚಾರ, ಮಾಟ ಮಂತ್ರಗಳ ಸಮೃದ್ಧಿ. ನಂಬಿಕೆಯು ಮೂಢನಂಬಿಕೆ ಆಗುವುದು ಯಾವಾಗ ? ತನ್ನ ಬುದ್ಧಿ ಬಿಟ್ಟು ದೇವರನ್ನೇ ಅವಲಂಬಿಸಿದಾಗ ಮಾನವ ತನ್ನ ಮಾನವತ್ವ ಬಿಡುತ್ತಾನೆ, ತನ್ನ ಜವಾಬ್ದಾರಿಯಿಂದ ವಿಮುಕ್ತನಾಗುತ್ತಾನೆ. ಇಂತಹ ಮೂಢನಂಬಿಕೆಗಳನ್ನು ಬಿಡಲು ಏನು ಮಾಡಬೇಕು ?

1.14 ಜ್ಞಾನ : ಒಂದು ವಸ್ತು / ವಿಷಯದ ಬಗ್ಗೆ ನಿಜವಾದ ಪರಿಚಯ. ಹಳ್ಳಿಯ ಜ್ಞಾನದ ಸಂಗತಿಗಳು—ಅವನ್ನು ಹೇಗೆ ಕಾಪಾಡಬಹುದು ? ನಮ್ಮ ಹಾಗೂ ನಮ್ಮ ಪರಿಸರದ ಬಗ್ಗೆ ಹೆಚ್ಚು ಹೆಚ್ಚಿನ ಜ್ಞಾನವನ್ನು ಯಾವ ರೀತಿಯಿಂದ ತಿಳಿದುಕೊಳ್ಳಬಹುದು ? ಅದಕ್ಕೆ ನಾವು ಮಾಡಬೇಕಾದ ಕೆಲಸಕಾರ್ಯಗಳೇನು ?

1.14 ಔಷಧಿ : ಆರೋಗ್ಯ ಕೆಟ್ಟಾಗ ಏನು ಮಾಡಲು ಸಾಧ್ಯ ? ಚಿಕ್ಕಮಕ್ಕಳನ್ನು ರೋಗದಿಂದ ಕಾಪಾಡಲು ಏನು ಮಾಡಬೇಕು ? ದೇಶದ ಆರೋಗ್ಯಾವಕಾಶಗಳು ಯಾರ ಪಾಲಿಗೆ ? ಪಾಶ್ಚಾತ್ಯ ಮದ್ದಿಗೂ ನಾಟಿ ಔಷಧಿಗೂ ಇರುವ ಅಂತರವೇನು ? ನಮ್ಮಲ್ಲಿ ಗಿಡಮೂಲಿಕೆಗಳ ಮದ್ದನ್ನು ಬಳಸುತ್ತಾರೆಯೇ ? ಅವನ್ನು ಇನ್ನೂ ಹೇಗೆ ವೃದ್ಧಿಪಡಿಸಬಹುದು ?

1.16 ಶುಚಿತ್ವ : ಆರೋಗ್ಯ ಕೆಡಲು ಮುಖ್ಯ ಕಾರಣ ಏನು ?—ದೇಹವನ್ನು, ಬಳಸುವ ವಸ್ತುಗಳನ್ನು, ಮನೆಯನ್ನು, ಊರನ್ನು ಶುಚಿಯಾಗಿ ಇಡದಿರುವುದು. ಶುಚಿತ್ವಕ್ಕೂ ಬಡತನಕ್ಕೂ ಏನು ಸಂಬಂಧ ?

1.17 ಐಶ್ವರ್ಯ : ಶ್ರೀಮಂತ, ಬಡವ- ಶ್ರೀಮಂತ ರಾಷ್ಟ್ರ-ಬಡರಾಷ್ಟ್ರಗಳ ಸಂಬಂಧ, ಭೇದ. ಭೇದದ ಮೂಲ ಯಾವುದು ? ಈ ಪರಿಸ್ಥಿತಿಯನ್ನು ಬದಲಾಯಿಸಬಹುದೋ ?

ಅನುಬಂಧ – ೩

ಅಕ್ಷರ ಜ್ಞಾನದ ವಿವಿಧ ಹಂತಗಳು

(ಮೂಲ : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ-೧, ಪುಟಗಳು : 40—52

1 ಮೊದಲ ಸೂತ್ರದಲ್ಲಿರುವ ಜನಕಶಬ್ದವನ್ನು ತೋರಿಸಿ ಓದಿಸುವುದು. ಉದಾ : ಜಗಳ.

2 ಸೂತ್ರವಿಲ್ಲದೆ ಬರೀ ಶಬ್ದವನ್ನು ಬರೆದು ತೋರಿಸಿ ಓದಿಸುವುದು. ಚರ್ಚಾಕೂಟದ ಸಮಯದಲ್ಲೇ ಪ್ರೇರಕನು ಕಪ್ಪುಹಲಗೆಯ ಮೇಲೆ ಶಬ್ದವನ್ನು ಹೊಸದಾಗಿ ಬರೆಯುವುದರ ಬದಲು, ಮೊದಲೇ ಒಂದು ಹಾಳೆಯಲ್ಲಿ ಶಬ್ದವನ್ನು ಬರೆದು ಆ ಹಾಳೆಯನ್ನು ತೋರಿಸಬಹುದು. ಇದೇ ಕ್ರಮವನ್ನು ಮುಂದಿನ ಹಂತಗಳಲ್ಲೂ ಹೊಸ ಜ್ಞಾನದ ಅರಿವು ಬರುವ ಸಂದರ್ಭಗಳಲ್ಲಿ ಬಳಸಬಹುದು.

3 ಶಬ್ದದ ಅಕ್ಷರ (ಉಚ್ಚಾರಣಾ ಘಟಕ) ಗಳನ್ನು ಬಿಡಿಬಿಡಿಯಾಗಿ ಬರೆದು ಓದಿಸುವುದು. ಉದಾ : ಜ ಗ ಳ.

4 ಮೊದಲನೇ ಅಕ್ಷರವನ್ನು ಬರೆದು ಓದಿಸುವುದು ಮತ್ತು ಅದನ್ನು ವಯಸ್ಕರು ಬರೆಯುವಂತೆ ನೋಡಿಕೊಳ್ಳುವುದು. ಉದಾ : ಜ

5 ಜ ಅಕ್ಷರದ ಎಲ್ಲಾ ಕಾಗುಣಿತಗಳನ್ನು ಒಂದರ ಕೆಳಗೆ ಒಂದರಂತೆ ಬರೆದು ಸ್ವಲ್ಪಕಾಲ ವಯಸ್ಕರು ಅದನ್ನು ಗಮನಿಸಲಿಕ್ಕೆ ಹೇಳುವುದು. ಉದಾ : ಜ ಜಾ ಜಿ ಜೀ ಜು ಜೂ ಜೃ ಜೆ ಜೇ ಜೈ ಜೊ ಜೋ ಜೌ ಜಂ ಜಃ

ಈ ಕಾಗುಣಿತಗಳ ಪಟ್ಟಿಯಿಂದ ವಯಸ್ಕರು ಕೇವಲ ಜ 'ಅಕ್ಷರ'ವನ್ನು ಗುರುತಿಸುತ್ತಾರೆ. ಉಳಿದ ಅಕ್ಷರಗಳನ್ನು ವಯಸ್ಕರೇ ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಿ ತಿಳಿಯುವಂತೆ ಪ್ರೇರಕ ಮಾಡಬೇಕಾದುದೇನು ?

ಓದಲಿಕ್ಕೂ ಬರೆಯಲಿಕ್ಕೂ ಕಲಿಯುವುದು ಒಂದು ಜ್ಞಾನಾರ್ಜನೆಯ ಕೃತಿ, ಬಾಯಿಪಾಠದಿಂದ ಅಥವಾ ನೆನಪಿನಿಂದ ಮಾಡುವ ಕೆಲಸವಲ್ಲ ಎಂದು ಮನಗಂಡಿದ್ದ ಪ್ರೇರಕನು, ಹೊಸ ಜ್ಞಾನವನ್ನು ಒಂದು ಸಮಸ್ಯೆಯ ರೂಪದಲ್ಲಿ ವಯಸ್ಕರ ಮುಂದಿಡುತ್ತಾನೆ. ಹೊಸ ವಿಷಯದ ಜ್ಞಾನವು ಸಮಸ್ಯೆಯನ್ನು ಪರಿಹಾರ ಮಾಡುವುದರ ಮೂಲಕ ಬರುವುದರಿಂದ ಅದು ಕೇವಲ ಪ್ರೇರಕರಿಂದ ಪಡೆದ ಕೊಡುಗೆ ಎಂದು ವಯಸ್ಕರಿಗೆ ಅನಿಸುವುದಿಲ್ಲ. ಬದಲಾಗಿ ತಾವೇ ಕ್ರಿಯಾತ್ಮಕವಾಗಿ ಗಳಿಸಿದ ಸೊತ್ತು ಎಂದು ಲೆಕ್ಕಿಸುತ್ತಾರೆ. ಹೊಸ ಜ್ಞಾನವು ಸಮಸ್ಯಾತ್ಮಕವಾಗಿ ಮೂಡಿಬರಲು ಪ್ರೇರಕನು ಎರಡು ಪ್ರಶ್ನೆಗಳನ್ನು ಕೇಳುತ್ತಾನೆ. ಪ್ರತಿ ಪ್ರಶ್ನೆಗೆ ವಯಸ್ಕರೇ ಉತ್ತರ ಕಂಡುಹಿಡಿಯುವಲ್ಲಿ ಸ್ವಲ್ಪ ಸಮಯ ಹಿಡಿಯಬಹುದು. ಅಂತಹ ಮೌನ ನಿಮಿಷಗಳ ಜಡತೆಯನ್ನು ತಾಳಲಾರದೇ ಪ್ರೇರಕನು ತಾನೇ ಉತ್ತರ ಕೊಡುವ ಪ್ರವೃತ್ತಿಗೆ ಇಳಿಯುವ ಸಂಭವವಿದೆ. ಆದರೆ ಆ ಮೌನವು ರಚನಾತ್ಮಕ ಕೃತಿಯ ಅತ್ಯವಶ್ಯಕ ಅಂಗ ಎಂದು ಅರಿತಿದ್ದ ಪ್ರೇರಕನು ವಯಸ್ಕರೇ ನಿಜೋತ್ತರವನ್ನು ಕಂಡುಹಿಡಿಯುವಲ್ಲಿ ಸಹಾಯಕನಾಗುವನು.

ಪ್ರೇರಕನು ಕೇಳುವ ಪ್ರಶ್ನೆಗಳು ಈ ರೀತಿ ಇವೆ: "ಈ ಎಲ್ಲಾ ಅಕ್ಷರಗಳಲ್ಲಿ ಒಂದೇ ರೀತಿಯಾಗಿರುವ ಭಾಗ ಮತ್ತು ಬೇರೆ ಬೇರೆ ರೀತಿಯಾಗಿರುವ ಭಾಗ ಏನಾದರೂ ಇದೆಯೇ ? ಅವು ಯಾವುವು ?" ಕೆಲವು ಸಂಶಯಪೂರ್ವಕ ಮೌನಕ್ಷಣಗಳ ನಂತರ ಒಬ್ಬ ವಯಸ್ಕ ಈ ರೀತಿ ಹೇಳಬಹುದು : "ಎಲ್ಲವೂ ಒಂದೇ ರೀತಿ ಶುರು ಆಗುತ್ತವೆ. ಆದರೆ ಬೇರೆ ಬೇರೆ ರೀತಿಗಳಲ್ಲಿ ಅವು ಅಂತ್ಯಗೊಳ್ಳುತ್ತವೆ."

ಈ ಜ್ಞಾನದ ಅರಿವು ಎಲ್ಲರಲ್ಲೂ ಮೂಡಿದ ಮೇಲೆ ಪ್ರೇರಕ ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾನೆ : "ಎಲ್ಲವೂ ಒಂದೇ ರೀತಿ ಶುರು ಆಗಿ, ಬೇರೆ ಬೇರೆ ರೀತಿಗಳಲ್ಲಿ ಅಂತ್ಯವಾದರೆ ಅವೆಲ್ಲವನ್ನು 'ಜ' ಎಂದೇ ಕರೆಯಬಹುದೋ ?" ಸ್ವಲ್ಪಕಾಲದ ನಂತರ ವಯಸ್ಕರು "ಇಲ್ಲ" ಎಂದು ಉತ್ತರಿಸುವರು.

ಈ ಹಂತದಲ್ಲಿ ಪ್ರೇರಕ ಹೊಸ ಜ್ಞಾನದ ಪರಿಚಯವನ್ನು ವಯಸ್ಕರಿಗೆ ಮಾಡಿ ಕೊಡುತ್ತಾನೆ. ಎಲ್ಲಾ ಕಾಗುಣಿತಾಕ್ಷರಗಳ ಬೇರೆ ಬೇರೆ ಉಚ್ಚಾರ ಹಾಗೂ ಅವನ್ನು ಬರೆಯುವ ರೀತಿಯನ್ನು ತೋರಿಸಿಕೊಡುತ್ತಾನೆ. ಸಮಸ್ಯೆಯ ರೂಪದಲ್ಲಿ ಹೊಸ ಜ್ಞಾನವು ಬಂದಿರುವುದರಿಂದ ಅದು ಕೇವಲ 'ದಾನ' ಎನಿಸುವುದಿಲ್ಲ.

6 ಇದೇ ಪ್ರಕಾರ ಶಬ್ದದ ಉಳಿದ ಅಕ್ಷರಗಳ ಪರಿಚಯವಾಗುವುದು. ಉದಾ : ಗ, ಳ ಮತ್ತು ಅವುಗಳ ಕಾಗುಣಿತಗಳು.

7 ಎಲ್ಲಾ ಅಕ್ಷರಗಳ ಪರಿಚಯವಾದ ಮೇಲೆ ಕಲಿತ ಅಕ್ಷರಗಳ ಕಾಗುಣಿತಗಳನ್ನು ಅಡ್ಡಕ್ಕೆ ಅಂದರೆ ಒಂದರ ನಂತರ ಒಂದರಂತೆ, ಸಾಲಾಗಿ ಪ್ರೇರಕನು ಬರೆಯುವನು.

ಉದಾ : ಜ ಜಾ ಜಿ ಜೀ ಜು ಜೂ ಜೃ ಜೆ ಜೇ ಜೈ ಜೊ ಜೋ ಜೌ ಜಂ ಜಃ
ಗ ಗಾ ಗಿ ಗೀ ಗು ಗೂ ಗೃ ಗೆ ಗೇ ಗೈ ಗೊ ಗೋ ಗೌ ಗಂ ಗಃ
ಳ ಳಾ ಳಿ ಳೀ ಳು ಳೂ ಳೃ ಳೆ ಳೇ ಳೈ ಳೊ ಳೋ ಳೌ ಳಂ ಳಃ

ಎಲ್ಲಾ ಸಾಲುಗಳನ್ನು ಪ್ರೇರಕನು ಮೊದಲು ಅಡ್ಡಕ್ಕೆ ಓದಿಸುತ್ತಾನೆ. ನಂತರ ನೇರಕ್ಕೆ ಅಂದರೆ ಒಂದರ ಕೆಳಗೆ ಒಂದು, ಇರುವ ಅಕ್ಷರಗಳನ್ನು ಒಂದು ಸಾಲು ಎಂಬ ಲೆಕ್ಕದಲ್ಲಿ ಪ್ರೇರಕನು ಓದಿಸುವನು. ಮೊದಲ ನೇರ ಸಾಲನ್ನು ಓದಿಸಿದ ನಂತರ ಪ್ರೇರಕ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾನೆ : "ಈ ಎಲ್ಲಾ ಬೇರೆ ಬೇರೆ ಅಕ್ಷರಗಳಲ್ಲಿ ಒಂದೇ ರೀತಿಯಾಗಿರುವ ಭಾಗ ಯಾವುದಾದರೂ ಇದೆಯೋ ?" ಸ್ವಲ್ಪ ಸಮಯದ ಮೌನದ ನಂತರ ವಯಸ್ಕರು ಈ ರೀತಿ ಉತ್ತರಿಸುವರು :

"ಎಲ್ಲಾ ಅಕ್ಷರಗಳಲ್ಲಿ ಕೊನೆಯ ಭಾಗ ಒಂದೇ ರೀತಿ ಇದೆ. ಆದರೆ ಅವು ಬೇರೆ ಬೇರೆ ರೀತಿಯಲ್ಲಿ ಶುರು ಆಗುತ್ತವೆ "

ನಂತರ ಪ್ರೇರಕನು ಈ ರೀತಿ ಕೇಳುವನು : "ಎಲ್ಲಾ ಅಕ್ಷರಗಳ ಕೊನೆಯ ಭಾಗ ಒಂದೇ ರೀತಿ ಇದ್ದರೆ, ಆ ಕೊನೆಯ ಭಾಗ ಸೂಚಿಸುವ ಉಚ್ಚಾರವೂ ಒಂದೇ ರೀತಿಯದೋ ? ಅದು ಯಾವುದು ?" ವಯಸ್ಕರು ಸಂದೇಹದಿಂದಲೇ "ಹೌದು" ಎಂದು ಉತ್ತರಕೊಟ್ಟು, ಬೇರೆ ಬೇರೆ ಪ್ರಯತ್ನಗಳ ಮೂಲಕ ಎಲ್ಲಾ ಅಕ್ಷರಗಳ ಕೊನೆಯಲ್ಲಿ ಬರುವ 'ಅ' ಉಚ್ಚಾರವನ್ನು ಕಂಡುಹಿಡಿಯುವರು.

ಈ ಹಂತದಲ್ಲಿ ಪ್ರೇರಕನು ಇನ್ನೂ ಹೊಸ ಜ್ಞಾನದ ಅರಿವನ್ನು ವಯಸ್ಕರಲ್ಲಿ ಮೂಡಿಸುವನು. 'ಅ' ಸ್ವರ ಬೇರೆ ಅಕ್ಷರದೊಡನೆ ಸೇರಿದಾಗ ಒಂದು ಕೋಡಿನಂತಿದ್ದು (ˉ), ಸ್ವತಂತ್ರವಾಗಿ ಬಂದಾಗ 'ಅ' ರೂಪದಲ್ಲಿ ಬರುತ್ತದೆ ಎಂದು ಪ್ರೇರಕನು ತೋರಿಸುತ್ತಾನೆ. ವಯಸ್ಕರು 'ಅ' ಅಕ್ಷರವನ್ನು ಓದಲೂ ಬರೆಯಲೂ ಕಲಿಯುವರು.

8 ಇದೇ ಪ್ರಕಾರ ಉಳಿದ ನೇರ ಸಾಲುಗಳ ಮೂಲಕ ಎಲ್ಲಾ ಸ್ವರಗಳನ್ನು ಓದಲೂ ಬರೆಯಲೂ ಪ್ರೇರಕನು ತೋರಿಸುತ್ತಾನೆ.

ಅ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

9 ಎಲ್ಲಾ ಸ್ವರಗಳ ಜ್ಞಾನ ಬಂದ ಮೇಲೆ ಪ್ರೇರಕನು ಒಂದರ ಕೆಳಗೆ ಒಂದರಂತೆ ಕ್ರಮವಾಗಿ 'ಜ' ದ ಸಾಲನ್ನೂ 'ಗ' ದ ಸಾಲನ್ನೂ 'ಳ' ದ ಸಾಲನ್ನೂ ಸ್ವರಗಳ ಸಾಲನ ೂ ಬರೆಯುತ್ತಾನೆ.

ಉದಾ : ಜ ಜಾ ಜಿ ಜೀ ಜು ಜೂ ಜೃ ಜೆ ಜೇ ಜೈ ಜೊ ಜೋ ಜೌ ಜಂ ಜಃ
ಗ ಗಾ ಗಿ ಗೀ ಗು ಗೂ ಗೃ ಗೆ ಗೇ ಗೈ ಗೊ ಗೋ ಗೌ ಗಂ ಗಃ
ಳ ಳಾ ಳಿ ಳೀ ಳು ಳೂ ಳೃ ಳೆ ಳೇ ಳೈ ಳೊ ಳೋ ಳೌ ಳಂ ಳಃ
ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಈ ಸಾಲುಗಳನ್ನು ಪ್ರೇರಕನು ಅಡ್ಡಕ್ಕೂ ನೇರಕ್ಕೂ ಓದಿಸುತ್ತಾನೆ ಹಾಗೆಯೇ ಯಾವ ಕ್ರಮವಿಲ್ಲದೇ ಅಕ್ಷರಗಳನ್ನು ಬಿಟ್ಟು ಬಿಟ್ಟು ಅವನು ಓದಿಸುತ್ತಾನೆ. ಈ ರೀತಿಯ ಪುನರಾವರ್ತನೆಯಿಂದ ಕಲಿತ ಅಕ್ಷರಗಳ ಜ್ಞಾನವು ವಯಸ್ಕರಿಗೆ ಇನ್ನೂ ಬೇರೂರಿ ನಿಲ್ಲುವುದು. ಈ ಕಾರ್ಯ ಮುಗಿದ ಮೇಲೆ ಪ್ರೇರಕನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾನೆ : "ನಾವು ಕಾಣುವ ಬೇರೆ ಬೇರೆ ಅಕ್ಷರಗಳಿಂದ ಏನನ್ನಾದರೂ ನಾವು ರಚಿಸಬಹುದೋ ?" ಪುನಃ ಸ್ವಲ್ಪ ಕಾಲದವರೆಗೆ ವಯಸ್ಕರು ಮೌನ ತಾಳಿಕೊಂಡಿರಬಹುದು. ಆದರೆ ನಿಧಾನವಾಗಿ ಶಬ್ದ ರಚನೆಯ ಗುಟ್ಟು ಬಯಲಾಗಿ ಬೇರೆ ಬೇರೆ ಅಕ್ಷರಗಳ ಬೇರೆ ಬೇರೆ ರೀತಿಯ ಜೋಡಣೆಯಿಂದ ತಮ್ಮ ಭಾಷೆಯಲ್ಲಿ ಉಪಯೋಗಿಸಲ್ಪಡುತ್ತಿರುವ ಹಲವಾರು ಶಬ್ದಗಳನ್ನು ಅವರು ಕಂಡು ಹಿಡಿಯುವರು. ಒಬ್ಬನು ಜಗಳ ಎಂದು ಕಂಡು ಹಿಡಿದರೆ, ಮತ್ತೊಬ್ಬನು ಗಳ, ಇನ್ನೊಬ್ಬನು ಗಜ, ಹೀಗೆ ಹೇಳುತ್ತಾ ಮುಂದುವರಿಯಬಹುದು. ಕೂಡಲೇ ಎಲ್ಲರೂ ಶಬ್ದ

ಜೋಡಣೆಯ ಆಟದಲ್ಲಿ ಮಗ್ನರಾಗಿ ‘ಹೊಸ ವಿಷಯವನ್ನು ತಾವೇ ಕಂಡುಹಿಡಿದೆವು’ ಎಂಬ ಸಂತೋಷದಿಂದ ‘ತಾನು ಮುಂದು ತಾನು ಮುಂದು’ ಎನ್ನುತ್ತಾ ಹಲವಾರು ಶಬ್ದಗಳ ರಾಶಿಯನ್ನೇ ಮಾಡುವರು. ಉದಾ : ಜಾಗ, ಗಾಳ, ಆಗ, ಜಗಿ, ಆಳ.......ಹೀಗೆ ಸೂತ್ರದಲ್ಲಿ ಮೂಲತಃ ಬಂದ ಶಬ್ದ ಜನಕಶಬ್ದವಾಗಿದ್ದು ಅದರಿಂದ ಹಲವಾರು ಜನ್ಯ ಶಬ್ದಗಳನ್ನು ವಯಸ್ಕರು ಕಂಡು ಹಿಡಿಯುವರು.

10 ಇದೇ ರೀತಿ ಬೇರೆ ಬೇರೆ ಸಮಸ್ಯೆಗಳನ್ನು ತೋರಿಸುವ ಉಳಿದ ಜನಕ ಶಬ್ದಗಳನ್ನು ಕ್ರಮವಾಗಿ ಎತ್ತಿಕೊಂಡು ಮುಂದುವರಿಯಬೇಕಾಗುವುದು.

ಎರಡನೇ ಜನಕಶಬ್ದದ ಅರಿವು ಆದ ಮೇಲೆ, ಎರಡೂ ಜನಕಶಬ್ದಗಳಲ್ಲಿ ಬರುವ ಅಕ್ಷರಗಳನ್ನು ಬೇರೆ ಬೇರೆ ರೀತಿಯಲ್ಲಿ ಕೂಡಿಸಿ ಹೊಸ ಹೊಸ ಶಬ್ದಗಳನ್ನು ವಯಸ್ಕರು ಕಂಡು ಹಿಡಿಯುವರು. ಇದೇ ರೀತಿ ಮೂರನೇ, ನಾಲ್ಕನೇ ಮತ್ತು ಐದನೇ ಜನಕ ಶಬ್ದಗಳ ವಿವೇಚನೆ ನಡೆಯುವುದು.

11 ಐದು ಅಥವಾ ಆರು ಜನಕಶಬ್ದಗಳನ್ನು ಕಲಿತ ಮೇಲೆ, ಶಬ್ದಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿ ಮಾತುಗಳನ್ನು ರಚಿಸುವ ತತ್ವವನ್ನು ವಯಸ್ಕರು ಕಂಡುಹಿಡಿಯುವರು. ಅವರು ಪೋಣಿಸಿದ ವಾಕ್ಯಗಳಲ್ಲಿ ಅವರ ಜೀವನದ ಅನುಭವವು ಸರಳವಾಗಿಯೂ ಕಾವ್ಯಾತ್ಮಕವಾಗಿಯೂ ಪ್ರತಿಬಿಂಬಿಸುವುದು.

ಹೀಗೆ ಪ್ರತಿ ಹಂತದಲ್ಲೂ ವಯಸ್ಕರು ರಚನಾತ್ಮಕವಾಗಿ ಭಾಗವಹಿಸಿ ಸಂವಾದದ ಮೂಲಕ ಜ್ಞಾನಾರ್ಜನೆಯು ತಾವೇ ಗಳಿಸಿದ ಸಂಗತಿ ಎಂಬ ಅರಿವಾಗಿ ಹೆಮ್ಮೆಯಿಂದ ಹಾಗೂ ಸಂತೋಷದಿಂದ ಮುಂದುವರಿಯುವರು. ಕನ್ನಡ ಭಾಷೆಯ ಲಿಪಿಯ ಇನ್ನೂ ಕೆಲವು ವೈಶಿಷ್ಟ್ಯಗಳನ್ನು ಇದೇ ರೀತಿ ರಚನಾತ್ಮಕವಾಗಿಯೇ ವಯಸ್ಕರು ಸಮಸ್ಯೆಯನ್ನು ಬಗೆಹರಿಸಿ ಕಂಡುಹಿಡಿಯುವಂತೆ ಪ್ರೇರಕನು ಅವಕಾಶವನ್ನು ಕಲ್ಪಿಸಬೇಕಾಗುವುದು.

12 ಒತ್ತಕ್ಷರಗಳ ಜ್ಞಾನ: ಒತ್ತಕ್ಷರಗಳನ್ನು ಮೂಲಾಕ್ಷರಗಳಿಂದ ಹೆಚ್ಚು ಬದಲಾವಣೆಯಾಗದೇ ಬರುವ ಒತ್ತಕ್ಷರಗಳು ಮತ್ತು ಹೆಚ್ಚು ಬದಲಾವಣೆಯಾಗಿ ಬರುವ ಒತ್ತಕ್ಷರಗಳು ಎಂದು ಎರಡು ಭಾಗ ಮಾಡಬಹುದು. ಮೊದಲು ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗದ ಒತ್ತಕ್ಷರಗಳನ್ನು ಗಮನಿಸುವುದು ಒಳ್ಳೆಯದು.

ಸೂತ್ರಮಾಲೆಯನ್ನು ರಚಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ವಿಷಯವೇನೆಂದರೆ ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗದ ಒತ್ತಕ್ಷರವಿರುವ ಜನಕಶಬ್ದದ ವಿವೇಚನೆ ಬರುವ ಮೊದಲು, ಆ ಒತ್ತಕ್ಷರದ ಮೂಲಾಕ್ಷರವಿರುವ ಶಬ್ದ ಬರುವಂತೆ ನೋಡಿಕೊಳ್ಳಬೇಕು. ಅಂದರೆ ಒತ್ತಕ್ಷರವಿರುವ ಜನಕ ಶಬ್ದವನ್ನು ಕಲಿಯುವ ಮೊದಲು ವಯಸ್ಕರಿಗೆ ಅದೇ ಅಕ್ಷರದ ಮೂಲರೂಪ ಗೊತ್ತಿರುತ್ತದೆ. ಉದಾ : ಆಮಲಗೊಂದಿಯ ಸೂತ್ರಮಾಲೆಯಲ್ಲಿ 10ನೇ ಜನಕಶಬ್ದ ಹರಿಕಥೆ ಆಗಿದ್ದು ನಂತರ ದೇವಸ್ಥಾನ ಎಂಬ ಜನಕಶಬ್ದ ಬಂದಿರುತ್ತದೆ.

ದೇವಸ್ಥಾನ ಶಬ್ದದಲ್ಲಿಯ ಹೊಸ ಅಕ್ಷರಗಳ ಪರಿಚಯವನ್ನು ಮೇಲೆ ಹೇಳಿದ ಕ್ರಮವನ್ನನುಸರಿಸಿ ಪಡೆದ ನಂತರ ಪ್ರೇರಕನು ಒತ್ತಕ್ಷರವಾಗಿದ್ದ ‘್ಥ’ ಅಕ್ಷರವನ್ನು ಪ್ರತ್ಯೇಕವಾಗಿ ತೋರಿಸುವನು. ಅದರ ಎಡಬದಿಗೆ ಥ ಅಕ್ಷರದ ಕಾಗುಣಿತಗಳನ್ನು ನೇರ ಸಾಲಾಗಿ ಅವನು ಬರೆಯುವನು ಮತ್ತು ಅವನ್ನು ಗಮನಿಸಲಿಕ್ಕೆ ವಯಸ್ಕರನು ಕೇಳುವನು.

ಉದಾ : ಥ ್ಥ
:
ಥಃ

ಸ್ವಲ್ಪ ಸಮಯದ ನಂತರ ಪ್ರೇರಕನು ವಯಸ್ಕರಿಗೆ ಈ ಪ್ರಶ್ನೆ ಹಾಕುವನು : “ನೇರ ಸಾಲಿನಲ್ಲಿರುವ ಅಕ್ಷರಗಳಿಗೂ ಬಲಬದಿಯಲ್ಲಿ ಬರೆದಿರುವ ಅಕ್ಷರಕ್ಕೂ ಏನು ವ್ಯತ್ಯಾಸವಿದೆ ?” ವಯಸ್ಕರು ವ್ಯತ್ಯಾಸವನ್ನು ಗಮನಿಸಿ “ಬಲಬದಿಯಲ್ಲಿದ್ದ ಅಕ್ಷರ ಸಾಲಿನಲ್ಲಿದ್ದ ಅಕ್ಷರಗಳನ್ನು ಹೋಲುತ್ತದೆ. ಆದರೆ ಅದು ಉಳಿದವುಗಳಿಗಿಂತ ಚಿಕ್ಕದಾಗಿಯೂ ‘ತಲೆಕಟ್ಟು’ ಇಲ್ಲದೆಯೂ ಬಂದಿದೆ” ಎಂದು ಉತ್ತರಿಸಬಹುದು. ಹೀಗೆ ಪ್ರೇರಕನು ಸಾಮಾನ್ಯವಾಗಿ ಎಲ್ಲಾ ಅಕ್ಷರಗಳ ಒತ್ತಕ್ಷರದ ಸ್ವರೂಪವನ್ನು ತೋರಿಸಿ ಕೊಡುವನು. ಒಂದು ಅಕ್ಷರವನ್ನು ಚಿಕ್ಕದಾಗಿ ತಲೆಕಟ್ಟು ಇಲ್ಲದೇ ಇನ್ನೊಂದು ಅಕ್ಷರದ ಕೆಳಗೆ ಬರೆದರೆ ಅದು ಒತ್ತಕ್ಷರವಾಗುತ್ತದೆ. ಮೂಲಾಕ್ಷರದಿಂದ ಬೇರೆ ರೂಪವಿರುವ ಮತ್ತು ಮೂಲಾಕ್ಷರವನ್ನೆ, ಆಕಾರದಲ್ಲಿ ಸಂಪೂರ್ಣವಾಗಿ ಹೋಲುವ ಒತ್ತಕ್ಷರಗಳ ಬಗ್ಗೆ ಈ ಹಂತದಲ್ಲಿ ಏನೂ ಹೇಳುವುದಿಲ್ಲ.

13 ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗುವ ಒತ್ತಕ್ಷರಗಳು: ಆಮಲಗೊಂದಿಯ ಸೂತ್ರಮಾಲೆಯಲ್ಲಿ 12ನೇ ಜನಕಶಬ್ದ ಪ್ರಯಾಣ. ಇದು ದೇವಸ್ಥಾನ ಜನಕಶಬ್ದದ ನಂತರವೇ ಬರುತ್ತದೆ. ಪ್ರಯಾಣ ಪದದಲ್ಲಿ '್ರ' ಚಿಹ್ನೆ ರಕಾರದ ಒತ್ತಕ್ಷರ ರೂಪ. ಅದು ಮೂಲಾಕ್ಷರವನ್ನು ಅಷ್ಟು ಹೋಲುವುದಿಲ್ಲ. ಪ್ರಯಾಣ ಶಬ್ದದ ಮೊದಲು 'ರ' ಕಾರ ಬರುವಂತೆ ನೋಡಿಕೊಳ್ಳಬೇಕು. ಅದೇ ರೀತಿ ಉಳಿದ ಇಂತಹ ಒತ್ತಕ್ಷರ ಇರುವ ಮೂಲಾಕ್ಷರಗಳ ಪರಿಚಯವೂ ಈಗಾಗಲೇ ಆಗಿರಬೇಕು. ಆಮಲಗೊಂದಿಯ ಸೂತ್ರಮಾಲೆಯಲ್ಲಿ ಪ್ರಯಾಣ ಜನಕಶಬ್ದದ ಮೊದಲು 'ರ' ಕಾರ 9ನೇ ಆಹಾರ ಪದದಲ್ಲಿದೆ; 'ಲ' ಕಾರ 3ನೇ ಕೂಲಿ ಪದದಲ್ಲಿದೆ: 'ಮ' ಕಾರ 4ನೇ ಭೂಮಿ ಪದದಲ್ಲಿದೆ; 'ತ' ಕಾರ 5ನೇ ಜೀತ ಪದದಲ್ಲಿದೆ; 'ನ' ಕಾರ 11ನೇ ದೇವಸ್ಥಾನ ಪದದಲ್ಲಿದೆ; ಮತ್ತು 'ಯ' ಕಾರ ಪ್ರಯಾಣ ಪದದಲ್ಲೇ ಇದೆ.

ಪ, ಯಾ, ಣ ಅಕ್ಷರಗಳ ಪರಿಚಯವಾದ ಮೇಲೆ ಪ್ರೇರಕನು ಕೆಲವು ಪ್ರಶ್ನೆಗಳ ಮುಖಾಂತರ ಮೂಲಾಕ್ಷರದಿಂದ ಹೆಚ್ಚು ಬದಲಾವಣೆಯಾಗಿ ಬರುವ ಒತ್ತಕ್ಷರಗಳ ಜ್ಞಾನ ಬರುವಂತೆ ನೋಡಿಕೊಳ್ಳುತ್ತಾನೆ. '್ರ' ಚಿಹ್ನೆಯನ್ನು ಬರೆದು, "ಈ ಚಿಹ್ನೆ ಏನು ?" ಎಂದು ವಯಸ್ಕರನು ಕೇಳುತ್ತಾನೆ. ಅದಕ್ಕೆ ಅವರು "ಅದು ಒಂದು ಒತ್ತಕ್ಷರವೇ ಇರಬೇಕು" ಎಂದು ಉತ್ತರ ಕೊಡುವರು. ನಂತರ ಪ್ರೇರಕನು "ಪ್ರಯಾಣ ಶಬ್ದದಲ್ಲಿ ಬರುವ ಉಚ್ಚಾರಗಳು ಯಾವುವು ?" ಎಂದು ಪ್ರಶ್ನೆ ಹಾಕುತ್ತಾನೆ. "ಅದರಲ್ಲಿ ಪ, ರ, ಯಾ ಮತ್ತು ಣ ಉಚ್ಚಾರಗಳು ಬರುತ್ತವೆ" ಎಂದು ವಯಸ್ಕರು ಉತ್ತರಿಸುವರು. "ಪ ಉಚ್ಚಾರದ ಚಿಹ್ನೆ ಪ, ಯಾ ಉಚ್ಚಾರದ ಚಿಹ್ನೆ ಯಾ, ಣ ಉಚ್ಚಾರದ ಚಿಹ್ನೆ ಣ ಎಂದಾದರೆ ಪ್ರಯಾಣ ಶಬ್ದದಲ್ಲಿ ರ ಉಚ್ಚಾರದ ಚಿಹ್ನೆ ಯಾವುದು ಇರಬಹುದು ?" ಎಂಬ ಪ್ರೇರಕನ ಪ್ರಶ್ನೆಗೆ "ಪ್ರಯಾಣ ಶಬ್ದದಲ್ಲಿ '್ರ' ಚಿಹ್ನೆಯೇ ರಕಾರವನ್ನು ಸೂಚಿಸುತ್ತದೆ" ಎಂದು ವಯಸ್ಕರು ದೃಢವಾಗಿ ಹೇಳಬಲ್ಲರು.

ಇದಾದ ಮೇಲೆ ಪ್ರೇರಕನು ಮತ್ತೊಂದು ಪ್ರಶ್ನೆಯನ್ನು ಕೇಳುತ್ತಾನೆ; "್ರ" ಒತ್ತಕ್ಷರವನ್ನು ರ ಅಕ್ಷರದೊಡನೆ ಹೋಲಿಸಿದಾಗ ಮತ್ತು '್ಥ' ಒತ್ತಕ್ಷರವನ್ನು ಥ ಅಕ್ಷರದೊಡನೆ ಹೋಲಿಸಿದಾಗ, ರ ಕಾರದ ಒತ್ತಕ್ಷರವಾದ '್ರ' ಹಾಗೂ ಥ ಕಾರದ ಒತ್ತಕ್ಷರವಾದ '್ಥ' ಇವುಗಳಲ್ಲಿ ಸಮಾನವಾದ ಮತ್ತು ಬೇರೆ ಬೇರೆಯಾಗಿರುವ ಅಂಶಗಳು ಏನಾದರೂ ಇವೆಯೇ ?" ವಯಸ್ಕರು ತಾವಾಗಿಯೇ ಈ ಎರಡು ಒತ್ತಕ್ಷರಗಳಲ್ಲಿರುವ ವ್ಯತ್ಯಾಸವನ್ನು ಕಂಡು ಹಿಡಿಯಲು ಶಕ್ಯರು. ಎರಡೂ ಒತ್ತಕ್ಷರಗಳು ಇನ್ನೊಂದು ಅಕ್ಷರದ ಕೆಳಗೆ ಬರುವುವು ಮತ್ತು ಚಿಕ್ಕದಾಗಿರುವುವು. ಇವು ಸಮಾನವಾದ ಸಂಗತಿಗಳು. ಬೇರೆ ಬೇರೆ ಆಗಿರುವ ಅಂಶವೆಂದರೆ ಥ ಕಾರದ ಒತ್ತಕ್ಷರ '್ಥ' ಮೂಲಾಕ್ಷರವನ್ನು ಹೆಚ್ಚಾಗಿ ಹೋಲುತ್ತದೆ. ಕೇವಲ ತಲೆಕಟ್ಟು ಹೋಗಿದೆ. ಆದರೆ ರ ಕಾರದ ಒತ್ತಕ್ಷರ '್ರ' ಮೂಲಾಕ್ಷರವನ್ನು ಹೆಚ್ಚು ಹೋಲುವುದಿಲ್ಲ. ಈ ಹಂತದಲ್ಲಿ ಪ್ರೇರಕನು '್ರ' ಮಾದರಿಯ ಉಳಿದ ಎಲ್ಲಾ ಒತ್ತಕ್ಷರಗಳನ್ನು ಅವುಗಳ ಮೂಲಾಕ್ಷರಗಳೊಡನೆ ಪಟ್ಟಿಮಾಡಿ ಬರೆದು ಇನ್ನೂ ಕೆಲವು ಹೊಸ ಜ್ಞಾನದ ಅರಿವು ಮೂಡಿಸುತ್ತಾನೆ ಹೊಸ ಜ್ಞಾನವು ಸಮಸ್ಯೆಯನ್ನು ಬಗೆಹರಿಸುವುದರ ಮೂಲಕ ಬಂದಿರುವುದರಿಂದ ಅದು ಪ್ರೇರಕನಿಂದ ಕೊಡಲ್ಪಟ್ಟ ಕಾಣಿಕೆಯಾಗಿ ಪರಿಣಮಿಸುವುದಿಲ್ಲ.

ಉದಾ : ರ ್ರ
ತ ್ತ
ನ ್ನ
ಮ ್ಮ
ಯ ್ಯ
ರ ್ರ
ಲ ್ಲ

14 ಮಹಾಪ್ರಾಣಗಳು: ಆಮಲಗೊಂದಿಯ ಸೂತ್ರಮಾಲೆಯಲ್ಲಿ 13ನೇ ಜನಕಶಬ್ದ ಮೂಢನಂಬಿಕೆ. ಇಲ್ಲಿ 'ಢ' ಎಂಬುದು ಮಹಾಪ್ರಾಣ. 2ನೇ ಜನಕಶಬ್ದವಾದ ಕಾಡು ಪದದಲ್ಲಿ 'ಡ' ಅಲ್ಪ ಪ್ರಾಣ ಇದೆ. ಅಷ್ಟೇ ಅಲ್ಲದೆ 13ನೇ ಜನಕಶಬ್ದದ ಪರಿಚಯ ಆದೊಡನೆ ಎಲ್ಲಾ ಅಲ್ಪಪ್ರಾಣಗಳ ಜ್ಞಾನವೂ ಬಂದಿರುತ್ತದೆ. ಪ್ರೇರಕನು ಡ ಮತ್ತು ಢ ಅಕ್ಷರಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಕೆಲವು ಪ್ರಶ್ನೆಗಳ ಮುಖಾಂತರ ಈ ಎರಡು ಅಕ್ಷರಗಳಲ್ಲಿಯ ವ್ಯತ್ಯಾಸವನ್ನು ವಯಸ್ಕರು ಕಂಡುಹಿಡಿಯುವಂತೆ ಮಾಡುತ್ತಾನೆ.

ಡ ಢ

ಪ್ರೇರಕ : "ಈ ಎರಡು ಅಕ್ಷರಗಳಲ್ಲಿ ಏನಾದರೂ ಹೋಲಿಕೆ ಕಾಣುತ್ತೀರೋ ?"

ವಯಸ್ಕ : "ಆ ಎರಡು ಅಕ್ಷರಗಳು ಸಾಧಾರಣ ಒಂದೇ ರೀತಿ ಇವೆ. ಆದರೆ ಎರಡನೇ ಅಕ್ಷರಕ್ಕೆ 'ಬಾಲ' ಒಂದು ಹೆಚ್ಚಿಗೆ ಇದೆ."

ಪ್ರೇರಕ : "ಆ ಎರಡು ಅಕ್ಷರಗಳ ಉಚ್ಚಾರಣೆಯಲ್ಲಿ ಏನಾದರೂ ಹೋಲಿಕೆ ಇದೆಯೋ ?"

ವಯಸ್ಕ : "ಎರಡು ಅಕ್ಷರಗಳ ಉಚ್ಚಾರವೂ ಸಾಧಾರಣ ಒಂದೇ. ಆದರೆ ಬಲಗಡೆಯ ಅಕ್ಷರಕ್ಕೆ ಹೆಚ್ಚು ಒತ್ತನ್ನು ಕೊಡಬೇಕು.

ಡ ಮತ್ತು ಢ ಅಕ್ಷರಗಳ ಹೋಲಿಕೆ ಮಾಡಿ ಅವುಗಳಲ್ಲಿಯ ವ್ಯತ್ಯಾಸವನ್ನು ಕಂಡುಹಿಡಿದ ಮೇಲೆ ಅದೇ ರೀತಿಯ ಸಂಬಂಧವಿರುವ ದ ಮತ್ತು ಧ, ಪ ಮತ್ತು ಫ ಅಕ್ಷರಗಳನ್ನು ಡ ಮತ್ತು ಢ ಅಕ್ಷರಗಳ ಕೆಳಗೆ ಕ್ರಮವಾಗಿ ಪ್ರೇರಕನು ಬರೆಯುವನು. ಬಲಬದಿಯಲ್ಲಿರುವ ಅಕ್ಷರ (ಮಹಾಪ್ರಾಣ) ಗಳನ್ನು ಎಡಬದಿಯಲ್ಲಿರುವ ಅಕ್ಷರ (ಅಲ್ಪಪ್ರಾಣ) ಗಳೊಡನೆ ಹೋಲಿಸಿ ಮಹಾಪ್ರಾಣಗಳ ಗುರುತನ್ನು ಪಡೆಯಲಾಗುವುದು.

ಡ ಢ
ದ ಧ
ಪ ಫ

ಇದೇ ರೀತಿಯ ಕ್ರಮವನ್ನನುಸರಿಸಿ ಅಲ್ಪಪ್ರಾಣದೊಡನೆ ಹೋಲಿಕೆ ಇರದ ಅಥವಾ ಅಲ್ಪಪ್ರಾಣಕ್ಕೆ 'ಬಾಲ' ಕೊಡುವುದರ ಜೊತೆಗೆ ಬೇರೆ ಮಾರ್ಪಾಡುಗಳನ್ನು ಹೊಂದಿರುವ ಮಹಾಪ್ರಾಣಗಳ ಪರಿಚಯವಾಗುವಂತೆ ನೋಡಿಕೊಳ್ಳಲಾಗುವುದು. ಮೊದಲು ಬೇರೆ ಬೇರೆ ಸಂದರ್ಭಗಳಲ್ಲಿ ಇಷ್ಟರವರೆಗೆ ಕಲಿತ ತ ಮತ್ತು ಥ ಅಕ್ಷರಗಳ ವ್ಯತ್ಯಾಸವನ್ನು ಕಂಡು ಹಿಡಿಯುವಂತೆ ಮಾಡಲಾಗುವುದು.

ಡ ಢ
ತ ಥ

ಈ ಅಕ್ಷರಗಳ ನಡುವಿನ ಹೋಲಿಕೆ ಮನವರಿಕೆ ಆದ ಮೇಲೆ ತ ಮತ್ತು ಥ ಅಕ್ಷರಗಳ ಕೆಳಗೆ ಕ್ರಮವಾಗಿ ಕ–ಖ, ಗ–ಘ, ಚ–ಛ, ಜ–ಝ, ಟ–ಠ, ಬ–ಭ ಅಕ್ಷರಗಳನ್ನು ಬರೆಯಲಾಗುವುದು. ತ ಮತ್ತು ಥ ಅಕ್ಷರಗಳಿಗೆ ಇರುವ ಸಂಬಂಧದ ಮಾದರಿಯಲ್ಲಿ, ಅವುಗಳ ಕೆಳಗೆ ಇರುವ ಬಲಬದಿಯಲ್ಲಿಯ ಅಕ್ಷರಗಳನ್ನು ಎಡಬದಿಯಲ್ಲಿರುವ ಅಕ್ಷರಗಳೊಡನೆ ಹೋಲಿಸುವುದರ ಮೂಲಕ ವಯಸ್ಕರು ಇನ್ನೂ ಕಲಿಯದಿದ್ದ ಮಹಾಪ್ರಾಣಗಳನ್ನು ಕಲಿಯುವರು.

ತ ಥ
ಕ ಖ
ಗ ಘ
ಚ ಛ
ಜ ಝ
ಟ ಠ
ಬ ಭ

15 ಮೂಲಾಕ್ಷರವನ್ನು ಸಂಪೂರ್ಣವಾಗಿ ಹೋಲುವ ಒತ್ತಕ್ಷರಗಳು ಸೂತ್ರಮಾಲೆಯ 14ನೇ ಜನಕಶಬ್ದ ಜ್ಞಾನ. ಇದರಲ್ಲಿಯ ಜಾ ಮತ್ತು ನ ಅಕ್ಷರಗಳ ಪರಿಚಯ ಈಗಾಗಲೇ ಆಗಿದೆ. '್ಞ' ಒಂದು ಒತ್ತಕ್ಷರವೆಂದಯ ವುಸ್ಕರಿಗೆ ತಿಳಿಯುತ್ತದೆ. ಅದು ಮೂಲರೂಪದಲ್ಲಿ ಇನ್ನೂ ಬಂದಿಲ್ಲ. ಆದರೆ ಮೂಲಾಕ್ಷರವೂ ಅದೇ ರೂಪದಲ್ಲಿ ಮಾತ್ರ ದೊಡ್ಡದಾಗಿರುತ್ತದೆ. ಈ ವಿಷಯವನ್ನು ವಯಸ್ಕರೇ ಕಂಡುಹಿಡಿಯುವಂತೆ ಮಾಡಲು '್ಞ' ಅಕ್ಷರದ ಎರಡು ರೂಪಗಳನ್ನು ಬರೆದು ಅವುಗಳನ್ನು ಹೋಲಿಸಲು ಕೇಳುತ್ತಾನೆ.

ಞಾ ್ಞಾ

ನಂತರ ಞ-್ಞ ಅಕ್ಷರಗಳ ಕೆಳಗೆ ಕ್ರಮವಾಗಿ ಖ-್ಖ, ಝ-್ಝ, ಟ-್ಟ, ಣ-್ಣ, ಬ-್ಬ, ಙ-್ಙ ಅಕ್ಷರಗಳನ್ನು ಬರೆದು ಅವುಗಳ ಪರಿಚಯವಾಗುವಂತೆ ಪ್ರೇರಕನು ನೋಡಿಕೊಳ್ಳುತ್ತಾನೆ. ಇವುಗಳಲ್ಲಿ ಙ ಅಕ್ಷರ ಒಂದನ್ನು ಬಿಟ್ಟರೆ ಉಳಿದ ಎಲ್ಲಾ ಅಕ್ಷರಗಳ ಪರಿಚಯ ಇಷ್ಟರವರೆಗೆ ಆಗಿದೆ.

ಞ	್ಞ
ಖ	್ಖ
ಝ	್ಝ
ಟ	್ಟ
ಣ	್ಣ
ಬ	್ಬ
ಙ	್ಙ

16 ಸೂತ್ರಮಾಲೆಯ 16ನೇ ಶಬ್ದ ಶುಚಿತ್ವ. ಇಲ್ಲಿ ಹೊಸದಾಗಿ ಕಲಿಯಬೇಕಾದ ಅಕ್ಷರ ಶು. ಈ ಅಕ್ಷರದ ಪರಿಚಯವಾದರೆ ಕನ್ನಡದ ಎಲ್ಲಾ ಅಕ್ಷರಗಳ ಪರಿಚಯವಾದಂತೆ. ಶ ಅಕ್ಷರ ಕಲಿತ ಮೇಲೆ ಇಷ್ಟರವರೆಗೆ ಕಲಿತ ಎಲ್ಲಾ ವ್ಯಂಜನಗಳಿಗೆ ಒತ್ತಕ್ಷರಗಳನ್ನು ಬರೆಯುವಂತೆ ಪ್ರೇರಕನು ವಯಸ್ಕರನ್ನು ಕೇಳಬಹುದು.

17 ಸೂತ್ರಮಾಲೆಯಲ್ಲಿ ಕೊನೆಯ ಶಬ್ದ ಐಶ್ವರ್ಯ. ಇದರಲ್ಲಿ ಕಲಿಯಬೇಕಾದ ಹೊಸ ಅಕ್ಷರ ಇಲ್ಲ. ಕೇವಲ ಅರ್ಕ ಚಿಹ್ನೆಯನ್ನು ಕಲಿಯಬೇಕಾಗಿರುವುದು. ಇದಕ್ಕೋಸ್ಕರ ಸಮಸ್ಯೆಯ ಬಗ್ಗೆ ಚರ್ಚೆ ನಡೆದ ಮೇಲೆ ಪ್ರೇರಕನು ಐಶ್ವರ್ಯ ಶಬ್ದದ ಕೆಳಗೆ ಐಶ್ವರ್ಯ ಎಂಬ ಪದದ ರೂಪ ಬರೆದು ಆ ಎರಡು ಪದಗಳನ್ನು ಹೋಲಿಸಲು ಕೇಳುತ್ತಾನೆ.

ಐಶ್ವರ್ಯ
ಐಶ್ವರ್ಯ

ಈ ಎರಡು ಪದಗಳ ಹೋಲಿಕೆ ಮಾಡುವಾಗ ನಡೆಯುವ ಚರ್ಚೆ ಈ ರೀತಿ ಇರಬಹುದು:

ಪ್ರೇರಕ : "ಈ ಎರಡು ಪದಗಳಲ್ಲಿ ನೀವೇನಾದರೂ ಹೋಲಿಕೆ ಕಾಣುತ್ತೀರೋ ?"

ವಯಸ್ಕ : "ಮೊದಲ ಶಬ್ದದ ಕೊನೆಯ ಅಕ್ಷರ-ರ. ಅದಕ್ಕೆ ಯ ಕಾರದ ಒತ್ತು 'ೖ' ಬಂದಿದೆ. ಎರಡನೇ ಪದದ ಕೊನೆಯ ಅಕ್ಷರ ಯ ಮತ್ತು ಅದರ ನಂತರ ಏನೋ ಒಂದು ಚಿಹ್ನೆ ಬಂದಿದೆ."

ಪ್ರೇರಕ : "ಆ ಚಿಹ್ನೆ ಏನಾಗಬಹುದು ? ಪದವನ್ನು ಉಚ್ಚಾರ ಮಾಡಿನೋಡಿದಾಗ ಏನು ಗೊತ್ತಾಗುತ್ತದೆ ?"

ವಯಸ್ಕ : "ಪದದ ಉಚ್ಚಾರ ಮಾಡುವಾಗ ರ ಕಾರ ಬರುತ್ತದೆ ಆದರೆ ಬರೆಯುವಾಗ ರಕಾರ ಇನ್ನೂ ಬಂದಿಲ್ಲ....ಬಹುಶಃ ಯ ದ ನಂತರ ಬರುವ ಚಿಹ್ನೆಯೇ ರಕಾರವಾಗಿರಬೇಕು."

ಪ್ರೇರಕ : " 'ೕ' ಚಿಹ್ನೆ ರ ಕಾರವಾದರೆ ಅದು ಯಾವ ಜಾಗದಲ್ಲಿದೆ ? ಉಚ್ಚಾರ ಮಾಡುವಾಗ ರ ಕಾರ ಯಾವ ಜಾಗದಲ್ಲಿ ಬರುತ್ತದೆ ?"

ವಯಸ್ಕ : "ಉಚ್ಚಾರ ಮಾಡುವಾಗ 'ರ' ಕಾರ 'ಯ' ಕಾರದ ಮೊದಲು ಬರುತ್ತದೆ. ಆದರೆ 'ರ' ಕಾರದ 'ೕ' ಚಿಹ್ನೆ 'ಯ' ಅಕ್ಷರದ ನಂತರ ಬರೆಯಲ್ಪಟ್ಟಿದೆ."

ಈ ಕ್ರಮಗಳನ್ನು ಅನುಸರಿಸಿ, ಕೇವಲ 60 ರಿಂದ 70 ತಾಸುಗಳಲ್ಲಿ ವಯಸ್ಕರು ಕನ್ನಡ ಲಿಪಿಯ ಜ್ಞಾನವನ್ನು ಪಡೆಯುವರು. ಪ್ರೇರಕನು ವಯಸ್ಕರಲ್ಲಿ ಅಕ್ಷರ ಜ್ಞಾನವನ್ನು ಮೂಡಿಸುವಾಗ ಒಂದು ಸಂಗತಿಯನ್ನು ಮನಸ್ಸಿನಲ್ಲಿಟ್ಟರೆ ಉಚಿತ. ವಯಸ್ಕರಿಗೆ ಓದಲು ತಕ್ಕ ಮಟ್ಟಿಗೆ ಸುಲಭವಾಗಿದ್ದಂತೆ, ಬರೆಯಲು ಅಷ್ಟು ಸುಲಭವಾಗಿರುವುದಿಲ್ಲ. ಬರವಣಿಗೆಗೆ ಕೈಬೆರಳುಗಳು ಸುಲಭವಾಗಿ ಕೂಡಿ ಬರುವುದಿಲ್ಲ. ಮಾತ್ರವಲ್ಲದೇ ವಯಸ್ಕರ ಜೀವನದಲ್ಲಿ ಓದುವಿಕೆಯ ಪ್ರಾಧಾನ್ಯವಿರುವುದಿಲ್ಲ. ಆದ್ದರಿಂದ ವಯಸ್ಕರು ಅಕ್ಷರಗಳನ್ನು ಕಲಿಯುವಾಗ ಓದುವಿಕೆಗೆ ಹೆಚ್ಚು ಮಹತ್ವ ಕೊಟ್ಟು, ಬರವಣಿಗೆಯನ್ನು ಸಾವಕಾಶವಾಗಿ ರೂಢಿಸಿಕೊಳ್ಳುವಂತೆ ಪ್ರೇರಕರು ನೋಡಿಕೊಳ್ಳಬಹುದು.

...ಕ್ಷರತೆ ಪುಸ್ತಕಮಾಲೆಯ ಕುರಿತು

ಅಕ್ಷರಗಳ ಕೆಳಗೆ ಕ್ರಮವಾಗಿ ಖ... ಅಕ್ಷರಗಳು: ... ಬಿಟ್ಟರೆ ಉಳಿದ ಎಲ್ಲಾ ಅಕ್ಷರ

[illegible]) : ತಾತ್ವಿಕ ವಿಷಯಗಳು ಮತ್ತು ರೂಪರೇಷೆಗಳು ಎಂಬ [illegible] ...ನೆಯದರಲ್ಲಿ ಪಾಉಲೊ ಫ್ರೈಇರೆಯು ಬರೆದ 'ಹತ್ತಿಕ್ಕಿದವರ [illegible] d) ಎಂಬ ಪುಸ್ತಕದಲ್ಲಿಯ ವಿಚಾರಗಳು ಸಂಕ್ಷಿಪ್ತವಾಗಿ ಬರುತ್ತವೆ. ಹಾಗೂ ಅವರು ಸಿದ್ಧ... [illegible] ...ಗೃತಿಯ' ರೂಪರೇಷೆಯನ್ನು ಅದರಲ್ಲಿ ಕೊಟ್ಟಿದೆ. ಅವೇ ತತ್ವಗಳನ್ನು ಅನುಸರಿಸಿ ಕರ್ನಾಟಕದ ಹಳ್ಳಿಗಳ ಪರಿಸ್ಥಿತಿಗೆ ಹಾಗೂ ಕನ್ನಡ ಭಾಷೆಗೆ ಅನ್ವಯಿಸುವಂತೆ ಯಾವ ರೀತಿಯಲ್ಲಿ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯನ್ನು ನಡೆಯಿಸಿಕೊಂಡು ಹೋಗಬಹುದು ಎಂಬುದರ ಬಗ್ಗೆ ವಿವೇಚನೆ ಎರಡನೇ ಪ್ರಬಂಧದಲ್ಲಿ ಬರುತ್ತದೆ.

ಮೊದಲ ಭಾಗಕ್ಕೆ ಪೂರಕವಾಗಿ ಇನ್ನೆರಡು ಭಾಗಗಳು ಬರುತ್ತವೆ. ಎರಡನೇ ಭಾಗದಲ್ಲಿ ಪ್ರೇರಕನು ಅರಿವಿನ ಜಾಗೃತಿ ಮತ್ತು ಸಾಕ್ಷರತೆಯನ್ನು ಯಾವ ರೀತಿಯಲ್ಲಿ ಒಂದು ಹಳ್ಳಿಯಲ್ಲಿ ನಡೆಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಸಲಹೆ ಸೂಚನೆಗಳು ಕೊಡಲ್ಪಟ್ಟಿವೆ. ಅರಿವಿನ ಜಾಗೃತಿ ಮತ್ತು ಸಾಕ್ಷರತೆಯನ್ನು ನೆರವೇರಿಸಲು ಅಗತ್ಯವಿದ್ದ ಚಿತ್ರ ರೂಪದ ಸೂತ್ರಗಳೂ ಅಕ್ಷರಪಟಗಳೂ ಅದರಲ್ಲಿ ಬರುತ್ತವೆ. ಮೂರನೇ ಭಾಗದಲ್ಲಿ ಪ್ರತಿಯೊಂದು ಸೂತ್ರದ ವಿಷಯದ ಮೇಲೆ ಸಾಮಾಜಿಕ ವಿಶ್ಲೇಷಣೆ ಹಾಗೂ ಅದರ ಬಗ್ಗೆ ಅಂಕಿಅಂಶಗಳನ್ನೊಳಗೊಂಡ ಪ್ರಬಂಧವಿರುವುದು.

ಕನ್ನಡಕ್ಕೆ ಅನ್ವಯಿಸುವಂತೆ ನಡೆಸಬಹುದಾದ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ಕಾರ್ಯಕ್ರಮದ ರೂಪರೇಷೆ ಕೆಲವು ವರ್ಷಗಳ ಪ್ರಯೋಗದ ಪ್ರತಿಫಲವಾಗಿದೆ. ಇಷ್ಟರವರೆಗೆ ಪಾಉಲೊ ಫ್ರೈಇರೆಯ ಅರಿವಿನ ಜಾಗೃತಿಯ ರೂಪರೇಷೆಗಳನ್ನು ಅಧರಿಸಿ ಭಾರತೀಯ ಭಾಷೆಗಳ ಲಿಪಿಗಳನ್ನು ಕಲಿಯಲು ಹಲವಾರು ಪ್ರಯೋಗಗಳು ಈಗಾಗಲೇ ನಡೆದಿದ್ದರೂ ಕನ್ನಡದಲ್ಲಿ ಮಾಡಿದ ಅಂತಹ ಪ್ರಯತ್ನ ಹೆಚ್ಚು ಸಮಂಜಸವೂ ಸಂಪೂರ್ಣವೂ ಆಗಿದೆ.

ಉಳಿದ ಕೆಲವು ಭಾರತೀಯ ಭಾಷೆಗಳಲ್ಲಿ ಫ್ರೈಇರೆಯ ತತ್ವಗಳನ್ನು ಅಳವಡಿಸಲು ಮಾಡಿದ ಪ್ರಯತ್ನಗಳಲ್ಲಿ ಕೊನೆಯ ತನಕವೂ ಆ ತತ್ವಗಳನ್ನು ಸಂಪೂರ್ಣವಾಗಿ ಬಳಸುವುದರಲ್ಲಿ ಅಷ್ಟೊಂದು ಯಶಸ್ಸು ಕಂಡು ಬಂದಿಲ್ಲ. ಭಾರತದ ಯಾವುದೇ ಭಾಷೆಯ ಹಾಗೆ ಕನ್ನಡ ಭಾಷೆಯ ಲಿಪಿ ವ್ಯವಸ್ಥೆಯಲ್ಲಿ ಹಲವಾರು ತೊಡಕಿನ ವಿಷಯಗಳಿವೆ. ಐರೋಪ್ಯ ಭಾಷೆಗಳ ಹಾಗೆ ಅದರ ವರ್ಣಮಾಲೆಯ ಅಕ್ಷರಗಳ ಸಂಖ್ಯೆ ಕಡಿಮೆಯಲ್ಲ; ವರ್ಣಸಂಯೋಜನೆ ಕೇವಲ ಒಂದಕ್ಕೊಂದು ಹೊಂದಿಸಿ ಬರೆಯುವ ಪ್ರಶ್ನೆಯಲ್ಲ. ಆದರೂ ಸಂವಾದದ ಮೂಲಕ ಸಮಸ್ಯೆಯನ್ನು ಬಗೆಹರಿಸುವ ಶಿಕ್ಷಣಕ್ರಮದ ತತ್ವಗಳನ್ನೇ ಕೊನೆಯತನಕವೂ ಅನುಸರಿಸಲಾಗಿದೆ. ಆ ಶಿಕ್ಷಣಕ್ರಮದ ಮೂಲತತ್ವವೇನೆಂದರೆ ಯಾವುದೇ ಹೊಸ ಜ್ಞಾನವನ್ನು ಶಿಕ್ಷಕನು ತನ್ನ 'ದಾನ'ವಾಗಿ ಶಿಕ್ಷಣಾರ್ಥಿಗಳಿಗೆ ನೀಡುವುದಿಲ್ಲ. ಬದಲಾಗಿ ಅದನ್ನು ಒಂದು ಸಮಸ್ಯೆಯನ್ನಾಗಿ ಕಲಿಯುವವರ ಮುಂದಿಡುತ್ತಾನೆ. ಆ ಸಮಸ್ಯೆಯನ್ನು ಬಗೆಹರಿಸುವುದರ ಮೂಲಕ ಅಥವಾ ಅದರ ಕೆಲವು ಸಂಗತಿಗಳನ್ನು ತಮ್ಮ ಬುದ್ಧಿಶಕ್ತಿಯಿಂದಲೇ ಕಂಡು ಹಿಡಿಯುವುದರ ಮೂಲಕ ಹೊಸ ಜ್ಞಾನವನ್ನು ಗಳಿಸುತ್ತಾರೆ. ಒಂದು ರೀತಿಯಲ್ಲಿ ಹೇಳುವುದಾದರೆ ಈ ಶಿಕ್ಷಣ ಕ್ರಮದಲ್ಲಿ ಶಿಕ್ಷಕ-ಶಿಕ್ಷಾರ್ಥಿ ಎಂಬ ಭೇದವಿಲ್ಲ ಎಲ್ಲರೂ ಶಿಕ್ಷಾರ್ಥಿಗಳೇ ಆದರೆ ಪ್ರತಿಯೊಬ್ಬರ ಜ್ಞಾನದ ಮಟ್ಟದಲ್ಲಿ ವ್ಯತ್ಯಾಸವಿಲ್ಲವೆಂದಲ್ಲ ಈ ಹೊಸ ಶಿಕ್ಷಣದ ಮತ್ತೊಂದು ಮುಖ್ಯ ಲಕ್ಷಣವೇನೆಂದರೆ ಕಲಿಯುವಿಕೆಯು ಕಲಿಯುವವರ ಜೀವನದಿಂದ ಹೊರತಾದುದಲ್ಲ ಒಂದು ಜನಸಮುದಾಯದ ಜೀವನ ಸಮಸ್ಯೆಗಳು ಅಥವಾ ಆಧಾರ ವಿಚಾರಗಳು ಕಲಿಯುವ ವಸ್ತುವಾಗಿವೆ. ತಮ್ಮ ಜೀವನವನ್ನು ಕಾಡುತ್ತಿದ್ದ ಸಮಸ್ಯೆಗಳ ನಿಜಸ್ವರೂಪವನ್ನು ಅರ್ಥಮಾಡಿಕೊಂಡು ಅವುಗಳನ್ನು ಬಗೆಹರಿಸಲು ಸೂಕ್ತ ಕಾರ್ಯಕ್ರಮ ಹಾಕುತ್ತಿರುವಾಗಲೇ ಕಲಿಯುವಿಕೆ ನೆರವೇರುತ್ತದೆ.

ಈ ರೀತಿಯ ಹೊಸ ಮಾದರಿಯ ವಯಸ್ಕರ ಶಿಕ್ಷಣವನ್ನು ನೆರವೇರಿಸಲು ಯೋಗ್ಯ ಪ್ರೇರಕರ ತರಬೇತಿ ಮಾಡಲು ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುವುದು. ಆ ತರಬೇತಿ ಶಿಬಿರಗಳಲ್ಲಿ ಹೊಸ ಶಿಕ್ಷಣಕ್ರಮದ ಬಗ್ಗೆ ಪರಿಣತಿಯನ್ನು ಗಳಿಸುವುದರ ಜೊತೆಗೆ ಅಂತಹ ಶಿಕ್ಷಣಕ್ರಮಕ್ಕೆ ಅವಶ್ಯವಾಗಿರುವ ಸ್ವಅರಿವು ಹಾಗೂ ಸಾಮಾಜಿಕ ವಿಶ್ಲೇಷಣೆಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು.